KABK210000242008

Presented on : 30-06-2008
Registered on : 30-06-2008
Decided on : 13-07-2026
Duration : 18 years, 0 months, 13 days

**ಪ್ರಧಾನ ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮುಧೋಳ.**

**ಉಪಸ್ಥಿತರು: ಶ್ರೀ ಲಗಮಾ ಎಸ್. ಹುಕ್ಕೇರಿ, ಬಿ.ಎ.ಎಲ್.ಎಲ್.ಬಿ (ಸ್ಪೆಷಲ್)**

**ದಿ: 13 ನೇ ಜುಲೈ ಮಾಹೇ-2026**

**ಸಿ.ಸಿ.ನಂ.479/2008**

ಫಿರ್ಯಾದಿದಾರರು: ಕರ್ನಾಟಕ ಸರ್ಕಾರದ ಪರವಾಗಿ,
ಆರಕ್ಷಕ ಉಪನಿರೀಕ್ಷಕರು, ಲೋಕಾಪೂರ.

**::ವಿರುದ್ಧ::**

ಆರೋಪಿ ನಂ.1: ರಂಗಪ್ಪ ವೆಂಕಪ್ಪ ನಾಯಕ.
ವಯಾ: ವಯಸ್ಕರರು ವರ್ಷ, ಉದ್ಯೋಗ: ಒಕ್ಕಲುತನ,
ಸಾ: ಕಾಡರಕೊಪ್ಪ, ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.2: ಭೀಮನಗೌಡ ವಾಸುಗೌಡ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.3: ವಾಸುಗೌಡ ಭೀಮನಗೌಡ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.4: ರಂಗನಗೌಡ ವಾಸುಗೌಡ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,

LAGAMA SHIVANAPPA HUKKERI
Digitally signed by LAGAMA SHIVANAPPA HUKKERI
Date: 2026.07.16 17:08:06 +0530

ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.5: ಗಂಗಪ್ಪ ಲಕ್ಷ್ಮಪ್ಪಾ ಅರಕೇರಿ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.6: ರವಿ ಗಂಗಪ್ಪಾ ಅರಕೇರಿ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.7: ರಾಮಪ್ಪ ರಂಗಪ್ಪ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.8: ಶಂಕರಗೌಡ ವೆಂಕನಗೌಡ ನಾಯಕ.

**(ಆರೋಪಿ ನಂ.8 ಇವರು ತೀರಿಕೊಂಡಿದ್ದರಿಂದ ಅವರ ವಿರುದ್ಧ ಪ್ರಕರಣ ಅಬೇಟ ಆಗಿರುತ್ತದೆ)**

ಆರೋಪಿ ನಂ.9: ವೆಂಕನಗೌಡ ಶಂಕರಗೌಡ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

**(Case against accused No.9 Spilt up)**

ಆರೋಪಿ ನಂ.10: ಪ್ರಶಾಂತ ರಾಮಣ್ಣ ಹುಣಶಿಕಟ್ಟಿ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.11: ಮೌನೇಶ ರಾಮಣ್ಣ ಹುಣಶಿಕಟ್ಟಿ.

ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.12: ರಾಮಪ್ಪ ಮಲ್ಲಪ್ಪ ಹುಣಶಿಕಟ್ಟಿ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.13: ಬಾಲಪ್ಪ ರಂಗಪ್ಪ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.14: ಸುರೇಶ ರಂಗಪ್ಪ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.15: ಲಚ್ಚಪ್ಪಗೌಡ ಕೃಷ್ಣಪ್ಪಗೌಡ ನಾಯಕ.

**(ಆರೋಪಿ ನಂ.15 ಇವರು ತೀರಿಕೊಂಡಿದ್ದರಿಂದ ಅವರ ವಿರುದ್ಧ ಪ್ರಕರಣ ಅಬೇಟ ಆಗಿರುತ್ತದೆ)**

ಆರೋಪಿ ನಂ.16: ಬಾಳಪ್ಪ ರಾಮಪ್ಪ ಅರಕೇರಿ.

**(ಆರೋಪಿ ನಂ.16 ಇವರು ತೀರಿಕೊಂಡಿದ್ದರಿಂದ ಅವರ ವಿರುದ್ಧ ಪ್ರಕರಣ ಅಬೇಟ ಆಗಿರುತ್ತದೆ)**

ಆರೋಪಿ ನಂ.17: ವೆಂಕಪ್ಪ ಗಂಗಪ್ಪಾ ಅರಕೇರಿ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.18: ಹಣಮಂತ ಭೀಮಪ್ಪಾ ಅರಕೇರಿ.

ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.19: ನೂರಸಾಬ ಮಸ್ತಾನಸಾಬ ಕುಂದರಗಿ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.20: ಫಕೀರಸಾಬ ನೂರಸಾಬ ಕುಂದರಗಿ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.21: ಪ್ರವೀಣ ವೆಂಕಪ್ಪ ಅರಕೇರಿ.

**(ಆರೋಪಿ ನಂ.16 ಇವರು ತೀರಿಕೊಂಡಿದ್ದರಿಂದ ಅವರ ವಿರುದ್ಧ ಪ್ರಕರಣ ಅಬೇಟ ಆಗಿರುತ್ತದೆ)**

ಆರೋಪಿ ನಂ.22: ತಿಮ್ಮಪ್ಪ ಬಸಪ್ಪ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಆರೋಪಿ ನಂ.23: ಮಾಂತೇಶ ತಿಮ್ಮಪ್ಪ ನಾಯಕ.

**(ಆರೋಪಿ ನಂ.23 ಇವರು ತೀರಿಕೊಂಡಿದ್ದರಿಂದ ಅವರ ವಿರುದ್ಧ ಪ್ರಕರಣ ಅಬೇಟ ಆಗಿರುತ್ತದೆ)**

ಆರೋಪಿ ನಂ.24: ಜಗದೀಶ ತಿಮ್ಮಣ್ಣ ನಾಯಕ.
ವಯಾ: ವಯಸ್ಕರರು ವರ್ಷ, ಸಾ: ಕಾಡರಕೊಪ್ಪ,
ತಾ: ಬಾದಾಮಿ, ಜಿ: ಬಾಗಲಕೋಟ.

ಘಟನೆ ನಡೆದ ದಿನಾಂಕ 10-07-2008

ಆರೋಪಿತರು ನ್ಯಾಯಾಲಯಕ್ಕೆ ಹಾಜರಾದ ಆರೋಪಿ ನಂ.1 ರಿಂದ 19, 21 ರಿಂದ 24

| | |
|---|---|
| ದಿನಾಂಕ | ರವರು ದಿ:17-07-2008 ಮತ್ತು ಆರೋಪಿ ನಂ.20 ರವರು ದಿ:20-08-2024. |
| ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ ದಿನಾಂಕ | ಆರೋಪಿ ನಂ.1 ರಿಂದ 6 ರವರು ದಿ:27-02-2009, ಆರೋಪಿ ನಂ.15 ರವರು ದಿ:20-06-2014, ಆರೋಪಿ ನಂ.14, 16 ಮತ್ತು 19 ರವರು ದಿ:09-07-2014, ಆರೋಪಿ ನಂ.7 ರಿಂದ 13, 17, 18, 21 ರಿಂದ 24 ರವರು ದಿ:17-07-2014 ಮತ್ತು ಆರೋಪಿ ನಂ.20 ರವರು ದಿ:20-08-2014. |
| ಸಾಕ್ಷಿದಾರರ ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | 07-01-2009 |
| ಸಾಕ್ಷ್ಯ ಮುಗಿದ ದಿನಾಂಕ | 16-06-2026 |
| ಪ್ರಕರಣದ ಆರೋಪಗಳು | ಭಾರತೀಯ ದಂಡ ಸಂಹಿತೆ ಕಲಂ 143, 147, 148, 323, 324, 326, 504, 506(2) ಸಹವಾಚಕ 149. |
| ನ್ಯಾಯಾಧೀಶರ ಅಭಿಪ್ರಾಯ | ಬಿಡುಗಡೆಗೊಳಿಸಲಾಗಿದೆ. |
| ಸರ್ಕಾರದ ಪರ ಅಭಿಯೋಜಕರು | ಸಹಾಯಕ ಸರ್ಕಾರಿ ಅಭಿಯೋಜಕರು |
| ಆರೋಪಿತರ ಪರ ವಕೀಲರು | ಶ್ರೀ. ಆರ್.ಎಚ್.ಸಿ. ವಕೀಲರು |

LAGAMA SHIVANAPPA HUKKERI
Digitally signed by LAGAMA SHIVANAPPA HUKKERI
Date: 2026.07.16 17:08:20 +0530

**(ಶ್ರೀ.ಲಗಮಾ ಹುಕ್ಕೇರಿ)**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಮುಧೋಳ.**

**:: ತೀರ್ಪು::**

ಚಾಸಾ-14 ಆರಕ್ಷಕ ಉಪನಿರೀಕ್ಷಕರು, ಲೋಕಾಪೂರ ಇವರು ಆರೋಪಿತರ ವಿರುದ್ಧ ತನಿಖೆಯನ್ನು ಪೂರೈಸಿ ಭಾರತೀಯ ದಂಡ ಸಂಹಿತೆ ಕಲಂ 143, 147, 148,

323, 324, 326, 504, 506(2) ಸಹವಾಚಕ 149 ರಡಿಯಲ್ಲಿ ಅಭಿಯೋಜನೆಯ ಮೂಲಕ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಾರಾಂಶವೇನಂದರೆಃ**

ಲೋಕಾಪೂರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಕಾಡರಕೊಪ್ಪ ಗ್ರಾಮದಲ್ಲಿರುವ ಫಿರ್ಯಾದಿದಾರರ ಮನೆಯ ಮುಂದೆ ದಿ:10-07-2008 ರಂದು ಮುಂಜಾನೆ 7.30 ಗಂಟೆಯ ಸುಮಾರಿಗೆ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಫಿರ್ಯಾದಿದಾರನು ಚಾಸಾ-6 ರಾಮಪ್ಪ ನಾಯಕ ಇವನಿಗೆ ಬೆಂಬಲ ಮಾಡಿದ್ದಾನೆ ಅಂತಾ ಅವನ ಮೇಲೆ ಸಿಟ್ಟಾಗಿ ಜಗಳ ತೆಗೆದು ಎಲೇ ರಾಮ್ಯಾ, ಬೋಸಡಿ ಮಗನ, ನಮ್ಮ ಜಮೀನದಲ್ಲಿ ಕಟ್ಟಡ ಮಾಡುವ ಕೆಲಸಕ್ಕೆ ಸ್ಟೇ ತರಿಸಿ ಕೆಲಸ ಬಂದ ಮಾಡಿಸಿದಿ, ನಿನ್ನ ಬಿಡುವುದಿಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಆರೋಪಿ ನಂ.1 ಇವರು ಅಲ್ಲೆ ಬಿದ್ದ ಬಡಿಗೆಯಿಂದ ಚಾಸಾ-1 ರವರ ತಲೆಗೆ, ಬಲಗಣ್ಣಿನ ಹತ್ತಿರ, ಬಲಕಿವಿಗೆ, ಬೆನ್ನಿಗೆ ಹಾಗೂ ಕಲ್ಲಿನಿಂದ ಬಲಗಾಲ ಬೆರಳಿಗೆ, ಎಡಗಾಲ ತೊಡೆಗೆ ಹೊಡೆದಿದ್ದು, ಆರೋಪಿ ನಂ.5 ರವರು ಚಾಸಾ-1 ರವರಿಗೆ ಬಡಿಗೆಯಿಂದ ತಲೆಗೆ ಹಾಗೂ ಕಲ್ಲಿನಿಂದ ಅವರ ಬೆನ್ನಿಗೆ ಹೊಡೆದಿದ್ದು, ಆಗ ಜಗಳ ಬಿಡಿಸಲು ಬಂದ ಚಾಸಾ-4 ರಿಂದ 6 ರವರಿಗೂ ಸಹ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಆರೋಪಿ ನಂ.2 ಇವನು ಚಾಸಾ-5 ಸುರೇಶ ಇವನಿಗೆ ಬಡಿಗೆಯಿಂದ ಎಡಗೈಗೆ ಹಾಗೂ ಕಲ್ಲಿನಿಂದ ಅವನ ಎಡಗಡೆ ಹೊಟ್ಟೆಗೆ ಹೊಡೆದು, ಆರೋಪಿ ನಂ.6 ರವರು ಸಹ ಚಾಸಾ-5 ರವರಿಗೆ ಕೈಯಿಂದ ಹಾಗೂ ಬಡಿಗೆಯಿಂದ ಅವನ ಎದೆಗೆ ಹೊಡೆದಿದ್ದು ಹಾಗೂ ಆರೋಪಿ ನಂ.4 ರವರು ಚಾಸಾ-4 ರುಕ್ಮವ್ವ ಇವಳಿಗೆ ಬಡಿಗೆಯಿಂದ ಅವಳ ತಲೆಗೆ ಹೊಡೆದಿದ್ದಲ್ಲದೇ, ಆರೋಪಿತರೆಲ್ಲರೂ

ಹೋಗುವಾಗ ಇನ್ನು ನಿಮಗ ಬಿಡುವುದಿಲ್ಲ ಖಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 143, 147, 148, 323, 324, 326, 504, 506(2) ಸಹವಾಚಕ 149 ರಡಿಯಲ್ಲಿ ಅಪರಾಧ ಮಾಡಿರುತ್ತಾರೆ ಎಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ ನಂತರ ಪೋಲಿಸರು ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಆರೋಪಿ ನಂ.1 ರಿಂದ 6 ರವರ ವಿರುದ್ಧ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿ ನಂ.1 ರಿಂದ 6 ಇವರು ತನಿಖಾ ಹಂತದಲ್ಲಿ ಜಾಮೀನು ಪಡೆದುಕೊಂಡಿದ್ದು ಇರುತ್ತದೆ. ತದನಂತರ ಆರೋಪಿತರಿಗೆ ಸಮನ್ಸ ಹೊರಡಿಸಿದಾಗ ಎಲ್ಲ ಆರೋಪಿತರು ಹಾಜರಾದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ನೀಡಲಾದ ಪದತ್ತವಾದ ಅಧಿಕಾರವನ್ನು ಚಲಾಯಿಸಿ, ಪೋಲಿಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ದಾಖಲೆಗಳನ್ನು ಆರೋಪಿ ನಂ.1 ರಿಂದ 6 ರವರಿಗೆ ಉಚಿತವಾಗಿ ನೀಡಿ, ದೋಷಾರೋಪಣೆಯನ್ನು ರಚಿಸಿ, ಆರೋಪಿತರಿಗೆ ಓದಿ ಹೇಳಲಾಗಿ, ಆರೋಪಿ ನಂ.1 ರಿಂದ 6 ರವರಿಗೆ ಓದಿ ಹೇಳಿದಾಗ ಅವರು ವಿಚಾರಣೆಯಾಗಬೇಕು ಎಂದು ತಿಳಿಸಿರುತ್ತಾರೆ.

ಸದರಿ ಪ್ರಕರಣ ವಿಚಾರಣೆಯಲ್ಲಿರುವಾಗ ಮಾನ್ಯ ಸಸಅರವರು ದಂಡ ಪ್ರಕ್ರಿಯಾ ಸಂಹಿತೆ ಕಲಂ 319 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಸದರಿ ಪ್ರಕರಣದಲ್ಲಿ ಆರೋಪಿ ನಂ.7 ರಿಂದ 24 ರವರನ್ನು ಸೇರ್ಪಡೆ ಮಾಡಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ. ತದನಂತರ ನ್ಯಾಯಾಲಯವು ನೋಟಿಸ ಹೊರಡಿಸಿದಾಗ ಸದರಿ ಆರೋಪಿತರು ತಮ್ಮ ವಕೀಲರ ಮೂಖಾಂತರ ಹಾಜರಾಗಿ ಸದರಿ ಅರ್ಜಿಗೆ ತಕರಾರರನ್ನು ಸಲ್ಲಿಸಿದ್ದು ಇರುತ್ತದೆ.

ತದನಂತರ ನ್ಯಾಯಾಲಯವು ಎರಡು ಪಕ್ಷಗಾರರ ವಾದವನ್ನು ಕೇಳಿ ಸದರಿ ಅರ್ಜಿಯನ್ನು ಪುರಸ್ಕರಿಸಿ ಆರೋಪಿ ನಂ.7 ರಿಂದ 24 ರವರನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಿಕೊಳ್ಳಲು ಆದೇಶ ಮಾಡಿದ್ದು ಇರುತ್ತದೆ. ತದನಂತರ ಆರೋಪಿ ನಂ.7 ರಿಂದ 24 ರವರು ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನು ಪಡೆದುಕೊಂಡ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ನೀಡಲಾದ ಪದತ್ತವಾದ ಅಧಿಕಾರವನ್ನು ಚಲಾಯಿಸಿ, ಪೋಲಿಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ದಾಖಲೆಗಳನ್ನು ಆರೋಪಿ ನಂ.7 ರಿಂದ 24 ರವರಿಗೆ ಉಚಿತವಾಗಿ ನೀಡಿ, ದೋಷಾರೋಪಣೆಯನ್ನು ರಚಿಸಿ, ಆರೋಪಿತರಿಗೆ ಓದಿ ಹೇಳಲಾಗಿ, ಆರೋಪಿ ನಂ.7 ರಿಂದ 24 ರವರಿಗೆ ಓದಿ ಹೇಳಿದಾಗ ಅವರು ವಿಚಾರಣೆಯಾಗಬೇಕು ಎಂದು ತಿಳಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಆರೋಪಿ ನಂ.9 ರವರಿಗೆ ನ್ಯಾಯಾಲಯವು ಹಲವಾರು ಬಾರೀ ಸಮನ್ಸ ಮತ್ತು ವಾರಂಟ ಹೊರಡಿಸಿದರೂ ಸಹ ಅವರು ನ್ಯಾಯಾಲಯದ ಮುಂದೆ ಹಾಜರ ಆಗದೇ ಇರುವುದರಿಂದ ಅವರ ವಿರುದ್ದ ನ್ಯಾಯಾಲಯವು split up ಪ್ರಕರಣವನ್ನು ದಾಖಲ ಮಾಡಲು ದಿ:22-04-2024 ರಂದು ಆದೇಶ ಮಾಡಿದ್ದು ಇರುತ್ತದೆ. ಅದೇ ರೀತಿ ಸದರಿ ಪ್ರಕರಣ ವಿಚಾರಣೆ ಹಂತದಲ್ಲಿರುವಾಗ ಆರೋಪಿ ನಂ.8, 15, 16, 21 ಮತ್ತು 23 ರವರು ತೀರಿಕೊಂಡ ಬಗ್ಗೆ ವರದಿಯಾಗಿದ್ದರಿಂದ ಅವರ ವಿರುದ್ದ ಪ್ರಕರಣ ಅಬೇಟ ಆಗಿರುತ್ತದೆ.

**4.** ಅಭಿಯೋಜನೆಯು ಆರೋಪಿ ನಂ.1 ರಿಂದ 7, 10 ರಿಂದ 14, 17 ರಿಂದ 20, 22 ಮತ್ತು 24 ರವರ ವಿರುದ್ಧದ ಅಪರಾಧಗಳನ್ನು ಸಾಭೀತುಪಡಿಸಲು ಪ್ರಾಸಾ-1 ರಿಂದ 12 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವ ಮೂಲಕ ನಿಪಿ-1 ರಿಂದ 12

ದಾಖಲೆಗಳನ್ನು ಮತ್ತು ಮು.ಮಾ.1 ರಿಂದ 11 ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತಾರೆ. ಸದರಿ ಪ್ರಕರಣದಲ್ಲಿ ಚಾಸಾ-5 ರವರು ತೀರಿಕೊಂಡ ಬಗ್ಗೆ ವರದಿಯಾಗಿದ್ದರಿಂದ ಅವರನ್ನು ವಿಚಾರಣೆಯಿಂದ ಕೈಬಿಟ್ಟಿದ್ದು ಇರುತ್ತದೆ. ಅದೇ ರೀತಿ ತನಿಖಾಧಿಕಾರಿಗಳಾದ ಚಾಸಾ-14 ರವರಿಗೆ ಈ ನ್ಯಾಯಾಲಯವು ಹಲವಾರು ಬಾರಿ ಸಮನ್ಸ ಮತ್ತು ವಾರಂಟ ಹೊರಡಿಸಿದರೂ ಸಹ ಅವರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಸಾಕ್ಷವನ್ನು ನುಡಿದಿರುವುದಿಲ್ಲ. ಆದ್ದರಿಂದ ಸದರಿ ಸಾಕ್ಷಿದಾರರನ್ನು ನ್ಯಾಯಾಲಯವು ವಿಚಾರಣೆಯಿಂದ ಕೈಬಿಟ್ಟಿದ್ದು ಇರುತ್ತದೆ. ಎಲ್ಲಾ ಸಾಕ್ಷಿದಾರರ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ 313 ರಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು ಮತ್ತು ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷ್ಯ ವಿಚಾರಣೆ ಮಾಡುವುದರ ಮೂಲಕ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**5.** ಉಭಯ ಪಕ್ಷಗಾರರ ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿದೆ.

**6.** ಈ ಮೇಲಿನ ಅಂಶಗಳಿಂದ ನ್ಯಾಯಾಲಯದ ನಿರ್ಣಯಕ್ಕೆ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

**ಅಂಶ ನಂಃ 1:** ದಿನಾಂಕ:10.07.2008 ರಂದು ಮುಂಜಾನೆ 7.30 ಗಂಟೆಯ ಸುಮಾರಿಗೆ ಲೋಕಾಪೂರ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕಾಡರಕೊಪ್ಪ ಗ್ರಾಮದಲ್ಲಿರುವ ಫಿರ್ಯಾದಿಯ ಮನೆಯ ಮುಂದೆ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು, ಆ ಮೂಲಕ ಆರೋಪಿತರು ಭಾರತೀಯ ದಂಡ

ಸಂಹಿತೆ ಕಲಂ 143 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**ಅಂಶ ನಂಃ 2:** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೊಂಬಿ ಮಾಡಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**ಅಂಶ ನಂಃ 3:** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಕೈಯಲ್ಲಿ ಬಡಿಗೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದು ದೊಂಬಿ ಮಾಡಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**ಅಂಶ ನಂಃ 4:** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರು ಜೊತೆ ಜಗಳ

ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಆರೋಪಿತರ ಪೈಕಿ ಆರೋಪಿ ನಂ.6 ರವರು ಚಾಸಾ-5 ರವರಿಗೆ ಕೈಯಿಂದ ಹೊಡೆದು ಸಾಧಾ ಸ್ವರೂಪದ ಗಾಯಪಡಿಸಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**ಅಂಶ ನಂಃ 5:** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರ ಜೊತೆ ಜಗಳ ತೆಗೆದು, ಅರೋಪಿ ನಂ.1 ರವರು ಚಾಸಾ-1 ರವರಿಗೆ ಬಡಿಗೆಯಿಂದ ತಲೆಗೆ, ಬಲಗಣ್ಣಿನ ಹತ್ತಿರ, ಬಲಕಿವಿಗೆ ಬೆನ್ನಿಗೆ ಹಾಗೂ ಕಲ್ಲಿನಿಂದ ಬಲಗಾಲ ಬೆರಳಿಗೆ, ಎಡಗಾಲ ತೊಡೆಗೆ ಹೊಡೆದಿದ್ದು, ಆರೋಪಿ ನಂ.5 ರವರು ಚಾಸಾ-1 ರವರಿಗೆ ಬಡಿಗೆಯಿಂದ ತಲೆಗೆ ಹಾಗೂ ಕಲ್ಲಿನಿಂದ ಬೆನ್ನಿಗೆ ಹೊಡೆದಿದ್ದು, ಆರೋಪಿ ನಂ.2 ರವರು ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ ಬಡಿಗೆಯಿಂದ ಎಡಗೈಗೆ ಹಾಗೂ ಕಲ್ಲಿನಿಂದ ಎಡಗಡೆ ಹೊಟ್ಟೆಗೆ ಹೊಡೆದಿದ್ದು, ಆರೋಪಿ ನಂ.6 ರವರು ಚಾಸಾ-5 ರವರಿಗೆ ಕಲ್ಲಿನಿಂದ ಅವನ ಹೊಟ್ಟೆಗೆ ಹೊಡೆದಿದ್ದು, ಆರೋಪಿ ನಂ.3 ರವರು ಚಾಸಾ-6 ರವರಿಗೆ ಕಲ್ಲಿನಿಂದ ತಲೆಗೆ ಮತ್ತು ಬಡಿಗೆಯಿಂದ ಎದೆಗೆ ಹೊಡೆದಿದ್ದು ಮತ್ತು ಆರೋಪಿ ನಂ.4 ರವರು ಚಾಸಾ-4 ರವರಿಗೆ

ಬಡಿಗೆಯಿಂದ ಹೊಡೆದು ಭಾರಿ ಸ್ವರೂಪದ ಗಾಯಪಡಿಸಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯ ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**<u>ಅಂಶ ನಂಃ 6:</u>** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಆರೋಪಿ ನಂ.13 ಮತ್ತು 14 ರವರು ಚಾಸಾ-1 ರವರ ಬಲಗಡೆ ಕಿವಿಗೆ ಹೊಡೆದು ತೀವ್ರ ಸ್ವರೂಪದ ಗಾಯಪಡಿಸ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 326 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯ ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**<u>ಅಂಶ ನಂಃ 7:</u>** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರು ಚಾಸಾ-6 ರವರಿಗೆ ಸಪೋರ್ಟ ಮಾಡಿದ್ದಾನೆ ಅಂತಾ ಚಾಸಾ-1 ರವರ ಮೇಲೆ ಸಿಟ್ಟಾಗಿ ಜಗಳ ತೆಗೆದು ಎಲೇ ರಾಮ್ಯಾ ಬೋಸಡಿ ಮಗನ, ನಮ್ಮ ಜಮೀನದಲ್ಲಿ ಕಟ್ಟಡ ಮಾಡುವ ಕೆಲಸಕ್ಕೆ ಸ್ಟೇ ತರಿಸಿ ಕೆಲಸ ಬಂದ ಮಾಡಿಸಿ ನಿನ್ನ ಬಿಡುವುದಿಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಶಾಂತಭಂಗವನ್ನುಂಟು ಮಾಡಿ, ಆ

ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**ಅಂಶ ನಂಃ 8:** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರು ಚಾಸಾ-6 ರವರಿಗೆ ಸಪೋರ್ಟ ಮಾಡಿದ್ದಾನೆ ಅಂತಾ ಚಾಸಾ-1 ರವರ ಮೇಲೆ ಸಿಟ್ಟಾಗಿ ಜಗಳ ತೆಗೆದು ಆರೋಪಿತರೆಲ್ಲರೂ ಹೋಗುವಾಗ ಇನ್ನು ನಿಮಗೆ ಬಿಡುವುದಿಲ್ಲ ಖಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 506(2) ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**ಅಂಶ ನಂ. 9:** ಆದೇಶ ಏನು ?

**7.** ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರ -

**ಅಂಶ ನಂ. 1 ರಿಂದ 8 - ನಕಾರಾತ್ಮಕವಾಗಿ,**

**ಅಂಶ ನಂ.9 ಕ್ಕೆ– ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ..**

**:: ಕಾರಣಗಳು ::**

**8. ಅಂಶ 1 ರಿಂದ 8:** ಅಭಿಯೋಜನೆಯು ಆರೋಪಿತರ ವಿರುದ್ಧ ಪ್ರಕರಣ ಸಾಭೀತುಪಡಿಸಲು 12 ಸಾಕ್ಷಿದಾರರನ್ನು ವಿಚಾರಣೆ ಮಾಡಿ 12 ದಾಖಲೆಗಳನ್ನು ಮತ್ತು ಮು.ಮಾ.1 ರಿಂದ 11 ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತದೆ. ಪ್ರಾಸಾ-1 ರಾಮಣ್ಣ ಶಂಕ್ರೆಪ್ಪ ಮುದ್ನೂರ ಇವರು ಫಿರ್ಯಾದಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಚಾಸಾ-4 ರಿಂದ 9 ರವರ ಪರಿಚಯವಿದೆ, ತನ್ನ ಜಮೀನು ರಾಮದುರ್ಗ ತಾಲೂಕ ನಂದ್ಯಾಳದಲ್ಲಿದೆ, ಆರೋಪಿತರ ಪರಿಚಯವಿದೆ, ತನ್ನ ಜಮೀನದ ಸ.ನಂ.135, 62/2, 62/7, ಒಟ್ಟು ಕ್ಷೇತ್ರ 9 ಎ-15 ಗುಂ ಇದ್ದು, ಈ ಜಮೀನುಗಳು ಚಾಸಾ-4 ರುಕ್ಮವ್ವಾ ರಂಗಪ್ಪ ನಾಯಕ ಇವರಿಗೆ ಸಂಬಂಧಪಟ್ಟಿದ್ದು ಇವೆ, ಈ ಜಮೀನುಗಳ ಬಗ್ಗೆ ವಾಸುಗೌಡ ಭೀಮನಗೌಡ ನಾಯಕ, ರಾಮಣ್ಣಾ ರಂಗಪ್ಪ ನಾಯಕ ಮತ್ತು ಗಂಗಪ್ಪ ಅರಕೇರಿ ಇವರ ನಡುವೆ ತಂಟೆ ತಕರಾರು ಇದ್ದು ಮತ್ತು ಸದರಿ ಜಮೀನುಗಳ ಬಗ್ಗೆ ಇದೇ ನ್ಯಾಯಾಲಯದಲ್ಲಿ ಕೇಸು ಇದೆ, ಸುಮಾರು 5-6 ತಿಂಗಳ ಹಿಂದೆ ಬೆಳಿಗ್ಗೆ 7.30 ಗಂಟೆಗೆ ಆರೋಪಿತರೆಲ್ಲರೂ ಬಂದು ರುಕ್ಮವ್ವ ನಾಯಕ ಇವಳ ಜೊತೆ ಶಾಮೀಲಾಗಿ ನೀನೇ ಅವರಿಗೆ ಆಸ್ತಿ ಕೊಡಿಸಬೇಕು ಅಂತಾ ಮಾಡಿದ್ದಿ ಅಂತಾ ತನ್ನ ಜೊತೆ ಜಗಳ ತೆಗೆದರು, ಆ ಸಮಯದಲ್ಲಿ ತಾನು ಮನೆಯಲ್ಲಿದ್ದೆ, ಒಟ್ಟು 24 ಜನರು ಕೂಡಕೊಂಡು ಬಂದರು, ಅವರೆಂದರೆ 1) ರಂಗಪ್ಪ ವೆಂಕಪ್ಪ ನಾಯಕ, ವಾಸುಗೌಡ ನಾಯಕ, ಶಂಕರಗೌಡ ನಾಯಕ, ಭೀಮನಗೌಡ ನಾಯಕ, ವೆಂಕಪ್ಪ ಶಂಕ್ರೆಪ್ಪ ನಾಯಕ, ರಾಮಣ್ಣ ರಂಗಪ್ಪ ನಾಯಕ, ಬಾಲಪ್ಪ ರಂಗಪ್ಪ ನಾಯಕ, ಸುರೇಶ ರಂಗಪ್ಪ ನಾಯಕ, ಲಚ್ಚಪ್ಪಾ ಕೃಷ್ಣಪ್ಪ ನಾಯಕ,

ಹನಮಂತ ಕನಸಗೇರಿ (ಅರಕೇರಿ), ಪ್ರಶಾಂತ ರಾಮಣ್ಣ ಹುಣಶಿಕಟ್ಟಿ, ಮನು ಹುಣಶಿಕಟ್ಟಿ, ರಾಮಣ್ಣ ಹುಣಶಿಕಟ್ಟಿ, ಬಾಲಪ್ಪ ಅರಕೇರಿ, ರವಿ ಅರಕೇರಿ ಇವರೆಲ್ಲರೂ ಬಂದು ಅವಾಚ್ಯ ಶಬ್ದಗಳಿಂದ ಬೈದು, ಕಲ್ಲು ಮತ್ತು ದೊಣ್ಣೆಯಿಂದ ತನ್ನ ತಲೆ ಮತ್ತು ಬೆನ್ನಿಗೆ ಹೊಡೆದರು ಹಾಗೂ ಎದೆಗೆ ಹೊಡೆದರು, ಕಲ್ಲಿನಿಂದ ಲಚ್ಚಪ್ಪ ಇವನು ತನ್ನ ತಲೆಗೆ ಹೊಡೆದ, ರಂಗಪ್ಪ ವೆಂಕಪ್ಪ ದೊಣ್ಣೆಯಿಂದ ತನ್ನ ಎದೆಗೆ ಹೊಡೆದ, ವೆಂಕಪ್ಪ ನಾಯಕ ಡೊಣ್ಣೆಯಿಂದ ತನ್ನ ಬೆನ್ನಿಗೆ ಹೊಡೆದ, ಬಾಲಪ್ಪ ರಂಗಪ್ಪ ನಾಯಕ ದೊಣ್ಣೆಯಿಂದ ಬೆನ್ನಿಗೆ ಹೊಡೆದ, ತನ್ನ ತಲೆಗೆ ರಕ್ತಗಾಯವಾಯಿತು, ಆರೋಪಿಗಳು ಒಟ್ಟು 5 ದೊಣ್ಣೆ ಮತ್ತು 5 ಕಲ್ಲು ತೆಗೆದುಕೊಂಡು ಬಂದಿದ್ದರು, ಸುರೇಶ, ರುಕ್ಮವ್ವಾ ರಂಗಪ್ಪ ನಾಯಕ, ವಿಠ್ಠಲ ಕಲ್ಲವ್ವ ಗದ್ದೇಪ್ಪಗೋಳ, ಕಾಡಪ್ಪ ಗೊಡಚಿ ಬಂದು ಗಲಾಟೆ ಬಿಡಿಸಿ ಸಮಾಧಾನ ಪಡಿಸಿದರು ಮತ್ತು ತನ್ನನ್ನು ಆಸ್ಪತ್ರೆಗೆ ದಾಖಲಸಿದರು, ತನ್ನ ಕಿವಿಗೆ ಎಟಾಗಿದ್ದರಿಂದ ತನಗೆ ಸ್ವಲ್ಪ ಪ್ರಜ್ಞೆ ತಪ್ಪಿತು, ಆರೋಪಿಗಳು ಗಲಾಟೆ ಬಿಡಿಸಲು ಬಂದ ಸುರೇಶನಿಗೂ ಹೊಡೆದರು, ಬಾಲಪ್ಪ ಆತನ ಎದೆಗೆ ಮತ್ತು ಹೊಟ್ಟೆಗೆ ದೊಣ್ಣೆಯಿಂದ ಹೊಡೆದ, ರುಕ್ಮವ್ವನ ಬೆನ್ನಿಗೆ ಮತ್ತು ತಲೆಗೆ ಹೊಡೆದರು ಮತ್ತು ಅವಳ ಹೊಟ್ಟೆಗೆ ಹೊಡೆದಿದ್ದು, ರಂಗಪ್ಪ, ವಾಸುಗೌಡ ಮತ್ತು ಭೀಮನಗೌಡ ಹೊಡೆದರು, ರವಿ ಅರಕೇರಿ ಕಲ್ಲಿನಿಂದ ರುಕ್ಮವ್ವನ ಹೊಟ್ಟೆಗೆ ಜಜ್ಜಿದ, ಉಳಿದ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದರು ಮತ್ತು ಇವರನ್ನು ಬಿಡಬೇಡಿರಿ ಖಲಾಸ ಮಾಡಿರಿ ಅಂತ ಉಳಿದ ಆರೋಪಿತರಿಗೆ ಶಂಕರಗೌಡ ನಾಯಕ, ಹನಮಂತ ಅರಕೇರಿ, ರಾಮಣ್ಣಾ ರಂಗಪ್ಪ ನಾಯಕ ಇವರು ಸ್ಥಳದಲ್ಲಿ ನಿಂತು ಪ್ರಚೋದನೆ ಮಾಡಿದರು ಮತ್ತು ಸ್ಥಳದಲ್ಲಿ

ಬಿಡಬೇಡಿರಿ ಅಂತಾ ಹೇಳುವಾಗ ಸುಮಾರು 15 ಜನರಿದ್ದರು, ಜಗಳ ಸಾಯಂಕಾಲ 7.30 ರಿಂದ 8.00 ಗಂಟೆಯವರೆಗೆ ನಡೆಯಿತು, ನಂತರ ತಾನು ರಮೇಶ ಪಾಟೀಲ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದೆ, ನಂತರ ಪೋಲಿಸರು ಆಸ್ಪತ್ರೆಗೆ ಬಂದಿದ್ದು, ಆ ಸಮಯದಲ್ಲಿ ತಾನು ದೂರು ದಾಖಲಿಸಿದೇನು, ಸದರಿ ನಿಪಿ-1 ಫಿರ್ಯಾದಿಯನ್ನು ರಂಗಪ್ಪ ವಸಂತಗೌಡ ನಾಯಕ ಇವರಿಂದ ಬರೆಸಿದ್ದೇನೆ, ತಾನು ಆಸ್ಪತ್ರೆಯಲ್ಲಿ ಸುಮಾರು 3-4 ದಿನ ಚಿಕಿತ್ಸೆ ಪಡೆದೆ, ನಂತರ ತಾನು ಪೋಲಿಸ ಠಾಣೆಗೆ ಹೋಗಿಲ್ಲ, ಮು.ಮಾ.1 ರಿಂದ 11 ನ್ನು ನೋಡಿ ಗುರುತಿಸುತ್ತೇನೆ, ಆ ದಿನ ಒಟ್ಟು 24 ಜನ ಬಂದಿದ್ದರು, ಆ 24 ಜನರಲ್ಲಿ ನ್ಯಾಯಾಲಯದ ಮುಂದಿರುವ 6 ಜನರು ಇದ್ದರು ಅವರನ್ನು ಗುರುತಿಸುತ್ತೇನೆ, ಫಿರ್ಯಾದಿ ಸಲ್ಲಿಸಿದ ನಂತರ ತಾನು ಪೋಲಿಸರ ಮುಂದೆ ಯಾವುದೇ ಮರುಹೇಳಿಕೆಯನ್ನು ಸಲ್ಲಿಸಿಲ್ಲ, ಮುಂದುವರೆದು ತನಗೆ 24 ಜನ ಆರೋಪಿತರು ಹೊಡಿಬಡಿ ಮಾಡಿರುತ್ತಾರೆ, ಅವರ ಪೈಕಿ ರಂಗಪ್ಪ ನಾಯಕ, ವೆಂಕಪ್ಪ ನಾಯಕ, ಪ್ರಶಾಂತ ಹುಣಸಿಕಟ್ಟಿ, ಮನು ಹುಣಸಿಕಟ್ಟಿ, ರಾಮಪ್ಪ ರಂಗಪ್ಪ ನಾಯಕ, ಬಾಳಪ್ಪ ರಂಗಪ್ಪ ನಾಯಕ, ಸುರೇಶ ರಂಗಪ್ಪ ನಾಯಕ ಇವರ ಹೆಸರುಗಳು ತನಗೆ ನೆನಪಿರುತ್ತವೆ ಮತ್ತು ಉಳಿದವರ ಹೆಸರುಗಳು ಈಗ ತನಗೆ ನೆನಪಿರುವುದಿಲ್ಲ ಏಕೆಂದರೆ ಘಟನೆಯಾಗಿ ತುಂಬಾ ವರ್ಷಗಳು ಆಗಿರುತ್ತವೆ, ಆರೋಪಿತರು ಹೊಡೆದಿದ್ದರಿಂದ ತನಗೆ ಕಿವಿಗೆ ಮತ್ತು ಬೆನ್ನಿಗೆ ಗಾಯಗಳಾಗಿದ್ದವು, ಆರೋಪಿತರು ಚಾಸಾ-4 ರವರಿಗೆ ಹೊಡಿಬಡಿ ಮಾಡಿದ್ದರಿಂದ ಅವರ ಎದೆಗೆ ತೀವ್ರ ಸ್ವರೂಪದ ಗಾಯ ಆಗಿತ್ತು, ಚಾಸಾ-4 ರವರಿಗೆ ಆರೋಪಿತರು ಕಟ್ಟಿಗೆ ಮತ್ತು ಕಲ್ಲಿನಿಂದ ಹೊಡೆದು ಜಜ್ಜಿದರು, ಚಾಸಾ-5 ರವರಿಗೆ ಆರೋಪಿತರು ಬಡಿಗೆಯಿಂದ ಅವರ

ಹೊಟ್ಟೆಗೆ ಮತ್ತು ಎದೆಗೆ ಹೊಡೆದಿದ್ದರು, ಆದ್ದರಿಂದ ಅವರಿಗೆ ಒಳಪೆಟ್ಟುಗಳಾಗಿದ್ದವು, ಆರೋಪಿತರು ತಮಗೆ ಹೊಡಿಬಡಿ ಮಾಡಿ ಗಾಯಪಡಿಸಿದ್ದರಿಂದ ತಾವು ಮುಧೋಳದ ರಮೇಶ ಪಾಟೀಲರವರ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರಿಗೆ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಅವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ಮೂಲ ಊರು ಕಾಡರಕೊಪ್ಪ, ತಾನು ಹುಟ್ಟಿದ್ದು, ಬೆಳೆದಿದ್ದು, ಕಣಬೂರ, ಕಾಡರಕೊಪ್ಪ ಗ್ರಾಮಕ್ಕೆ ಬಂದು 16 ವರ್ಷವಾಯಿತು, ಕಣಬೂರ ಗ್ರಾಮದಲ್ಲಿ ತನ್ನ ಜಮೀನು ಮುಳುಗಡೆಯಾದ ಪ್ರಯುಕ್ತ ಕಾಡರಕೊಪ್ಪ ಗ್ರಾಮದಲ್ಲಿ ಹೊಲ ತೆಗೆದುಕೊಂಡು ಇರುತ್ತೇನೆ, ತಾನು ರಮೇಶ ಪಾಟೀಲರವರ ಆಸ್ಪತ್ರೆಯಲ್ಲಿದ್ದಾಗ ಲೋಕಾಪೂರ ಪೋಲಿಸರು ಬಂದು ತನ್ನ ಫಿರ್ಯಾದಿಯನ್ನು ಪಡೆದಿದ್ದಾರೆ, ರಮೇಶ ಪಾಟೀಲ ಆಸ್ಪತ್ರೆಯ್ಲಲಿ ನೀವು ಫಿರ್ಯಾದಿಯನ್ನು ಬರೆದುಕೊಟ್ಟಿದ್ದೀರೋ ಅಥವಾ ಹೇಳಿಕೆ ಫಿರ್ಯಾದಿ ಕೊಟ್ಟಿದ್ದೀರೋ ಎನ್ನುವ ಪ್ರಶ್ನೆಗೆ ಮೊದಲು ಪೋಲಿಸ ಠಾಣೆಯಲ್ಲಿ ಫಿರ್ಯಾದಿ ಕೊಟ್ಟು ಬಂದಿದ್ದೇವೆ ಅಂತಾ ಹೇಳಿದ್ದಾರೆ, ಆ ದಿನ ಲೋಕಾಪೂರ ಪೋಲಿಸ ಠಾಣೆಯಲ್ಲಿ ಅಂದಾಜು ಮುಂಜಾನೆ 9.30 ಕ್ಕೆ ಫಿರ್ಯಾದಿ ಕೊಟ್ಟು ಬಂದಿದ್ದೇವೆ, ಲೋಕಾಪೂರ ಪೋಲಿಸ ಠಾಣೆಯಲ್ಲಿ ರಂಗಪ್ಪಾ ವಸಂತ ನಾಯಕ ಅನ್ನುವವರ ಹತ್ತಿರ ಫಿರ್ಯಾದಿಯನ್ನು ಬರೆಸಿಕೊಟ್ಟಿದ್ದೇವೆ, ತಾನು ಪೋಲಿಸ ಠಾಣೆಗೆ ಬಂದಾಗ ಮಾತನಾಡುವ ಸ್ಥಿತಿಯಲ್ಲಿದ್ದೆ, ಪೋಲಿಸ ಠಾಣೆಯಲ್ಲಿ ಪೋಲಿಸ ಅಧಿಕಾರಿಗಳಿದ್ದರು, ಪೋಲಿಸರಿಗೆ ತಾನು ಘಟನೆಯನ್ನು ಹೇಳಿ ಬರೆಸಿದ್ದೇನೆ, ವಸಂತ ನಾಯಕನನ್ನು ತಾವೇ ಕರೆದುಕೊಂಡು ಬಂದಿದ್ದೇವೆ ಅಂದರೆ ರಂಗಪ್ಪ ವಸಂತ ನಾಯಕ ಅಲ್ಲದೇ ತಮ್ಮ ಜೊತೆ ವಿಠ್ಠಲ ಮಾದರ ಎನ್ನುವವರು

ಬಂದಿದ್ದರು, ಘಟನೆ ತಮ್ಮೂರಿನಲ್ಲಿ ಬೆಳಿಗ್ಗೆ 8.30 ಗಂಟೆಗೆ ಆಗಿದೆ, ಆರೋಪಿಗಳ ಜೊತೆ ಹೊಲ ಮನೆ ಬಗ್ಗೆ ಯಾವುದೇ ನ್ಯಾಯ ಇಲ್ಲ, ರುಕ್ಮವ್ವಾ ರಂಗಪ್ಪ ನಾಯಕರವರಿಗೆ ಮತ್ತು ಆರೋಪಿತರಿಗೂ ಹೊಲದ ಬಗ್ಗೆ ತಂಟೆ ತಕರಾರು ಇತ್ತು, ಸ.ನಂ.62/6 ಮತ್ತು 62/8 ಎರಡು ಹೊಲಗಳ ಬಗ್ಗೆ ಅವರುಗಳ ನಡುವೆ ತಂಟೆ ಇತ್ತು, ರುಕ್ಮವ್ವನ ಮಕ್ಕಳು ಆರೋಪಿತರಿಗೆ ಆಸ್ತಿ ಮಾರಿದ್ದು, ತನ್ನ ಗಂಡನ ಆಸ್ತಿ ತನಗೆ ಪಾಲು ಕೊಡದೇ ಮಾರಿದ್ದಾರೆಂದು ರುಕ್ಮವ್ವಳಿಗೆ ಮತ್ತು ಆರೋಪಿತರಿಗೆ ತಂಟೆ ಇತ್ತು, ರುಕ್ಮವ್ವಾ ಮತ್ತು ಆರೋಪಿತರ ನಡುವೆ ಮೊದಲು ಗಲಾಟೆಯಾಗಿಲ್ಲ, ತಾನು ರುಕ್ಮವ್ವಳ ಜೊತೆ ನ್ಯಾಯಾಲಯಕ್ಕೆ ಬರುತ್ತಿದ್ದು, ರುಕ್ಮವ್ವ ತನ್ನ ಮಗನ ವಿರುದ್ದ ಬೇರೆಯಾದ ಆಸ್ತಿಯ ಸಲುವಾಗಿ ತಾನು ಕರೆದಾಗ ತಾನು ಆಕೆಯ ಜೊತೆ ಬರುತ್ತಿದ್ದೆ, ರುಕ್ಮವ್ವ ತನ್ನ ಸಂಬಂಧಿಕಳು, ತನಗಿಂತ ಆತ್ಮೀಯರು ಮತ್ತು ಸಂಬಂಧಿಕರು ರುಕ್ಮವ್ವಳಿಗೆ ಊರಲ್ಲಿ ಇದ್ದಾರೆ, ದಿ:10-07-2008 ರಂದು ಬೆಳಿಗ್ಗೆ 8.30 ಗಂಟೆಗೆ ಕಾಡರಕೊಪ್ಪದ ತಮ್ಮ ಮನೆಯ ಮುಂದೆ ಘಟನೆಯಾಗಿದೆ, ತಾವು ಇರುವ ಸ್ಥಳಕ್ಕೆ ಪಾಲ್ಕಿಮಾನ್ಯ ಏರಿಯಾ ಅಂತಾ ಹೇಳುತ್ತಾರೆ, ಪಾಲ್ಕಿಮಾನ್ಯ ಏರಿಯಾದಲ್ಲಿ ಸದಾಶಿವ ನಗರ ಬರುತ್ತದೆ, 8.30ರ ಸಮಯದಲ್ಲಿ ತಾನು ತಮ್ಮ ಮನೆಯ ಮುಂದೆ ಇದ್ದೇನು, ಪಾಲ್ಕಿಮಾನ್ಯದ ಸದಾಶೀವ ನಗರದಲ್ಲಿ 20-30 ಮನೆಗಳಾಗಿವೆ, ತಮ್ಮ ಮನೆಯ ಎಡಕ್ಕೆ ಬಲಕ್ಕೆ ರಂಗಪ್ಪಾ ಅರಕೇರಿ (ಎ-5), (ಎ-3) ವಾಸು ನಾಯಕ, ರಂಗಪ್ಪ ನಾಯಕ (ಎ-1) ಹಾಗೂ ಇತರ ಮನೆಗಳಿವೆ, ತಮ್ಮ ಮನೆಯ ಎಡಗಡೆಯಿಂದ ರಂಗಪ್ಪ ನಾಯಕ ಬಂದರು, ಗಂಗಪ್ಪಾ ಅರಕೇರಿ, ವಾಸಪ್ಪಾ ನಾಯಕ, ವಾಸು ನಾಯಕನ ಮಕ್ಕಳು ರಂಗನಗೌಡ ಹಾಗೂ ಗೌಡಣ್ಣ ಬಂದರು, ಇವರೆಲ್ಲದೇ ಇನ್ನೂ ಆರ್.ಆರ್. ನಾಯಕ, ಪ್ರಶಾಂತ ರಾಮಪ್ಪ ಹುಣಶಿಕಟ್ಟಿ, ಬಾಳಪ್ಪ

ರಂಗಪ್ಪ ನಾಯಕ, ಸುರೇಶ ರಂಗಪ್ಪ ನಾಯಕ, ಬಾಳಪ್ಪ ಅರಕೇರಿ, ವೆಂಕಪ್ಪ ನಾಯಕ ಇನ್ನೂ ಕೆಲವು ಜನ ಇದ್ದರು, ತಮ್ಮ ಮನೆಯ ಹತ್ತಿರ ರಂಗಪ್ಪ ನಾಯಕ ಬಂದು ನೀನು ರುಕ್ಮವ್ವ ನಾಯಕ ಇವರಿಗೆ ಏಕೆ ಸಪೋರ್ಟ ಮಾಡುತ್ತೀಯಾ ಎಂದು ಹೇಳಿದರು, ಅದಕ್ಕೆ ತಾನು ಅವರ ಜೊತೆ ಸುಮ್ಮನೆ ಹೋಗುತ್ತೇನೆ, ನಿಮಗೇನೂ, ತಾನು ಆಸ್ತಿ ಬಿಡರಿ ಅಂತಾ ಹೇಳಿಲ್ಲ ಅಂತಾ ಹೇಳಿದನು, ಆಗ ಆರೋಪಿತರು ನೀ ಸಪೋರ್ಟ ಮಾಡುತ್ತಿ ಅಂತಾ ಹೇಳಿ ಕಲ್ಲು, ಬಡಿಗೆ ಹಾಗೂ ಚಪ್ಪಲಿ ಹಿಡಿದುಕೊಂಡು ಪ್ರತಿಯೊಬ್ಬರು ತನಗೆ ಹೊಡೆದರು, ರಂಗಪ್ಪಾ ನಾಯಕ, ವಾಸಪ್ಪ ನಾಯಕ, ದುರ್ಗಪ್ಪ ನಾಯಕ ಇವರುಗಳು ತನಗೆ ಬೈದಿದ್ದಾರೆ ಹಾಗೂ ಬಡಿದಿದ್ದಾರೆ, ರಂಗಪ್ಪ ನಾಯಕ ಇವನು ಎಲ್ಲರಿಗಿಂತ ಮುಂದೆ ಕಲ್ಲು ತೆಗೆದುಕೊಂಡು ಬಂದು ಸದರಿ ಕಲ್ಲಿನಿಂದ 3-4 ಏಟು ತನ್ನ ತಲೆಗೆ, ಬೆನ್ನಿಗೆ ಹೊಡೆದನು, ತನ್ನ ಜೊತೆ 5 ನಿಮೀಷ ಜಗಳ ಮಾಡಿ ಹೊಡೆದಿದ್ದಾನೆ, ಆರೋಪಿ ನಂ.1 ತನಗೆ ಕಲ್ಲಿನಿಂದ ತಲೆಗೆ ಹೊಡೆದಿದ್ದರಿಂದ ಎಚ್ಚರ ತಪ್ಪಿತು, ನಂತರ ಸ್ವಲ್ಪ ಎಚ್ಚರವಾದಾಗ ಅಂದರೆ ತನ್ನನ್ನು ನೀರು ಹೊಡೆದು ಎಚ್ಚರ ಮಾಡಿದರು, ತನ್ನ ಹೆಂಡತಿ ತನಗೆ ಉಪಚಾರ ಮಾಡಿದಳು, 5 ನಿಮೀಷದ ನಂತರ ಎಚ್ಚರವಾಯಿತು, ಆಗ ಅಲ್ಲಿಗೆ ಬಂದವರೆಲ್ಲಾ ನಿಂತಿದ್ದರು, ಆಗ ವಾಸಪ್ಪ ನಾಯಕ, ರಂಗಣ್ಣ ನಾಯಕ, ಭೀಮನಗೌಡ ನಾಯಕ ತನಗೆ ಹೊಡೆದಿದ್ದಾರೆ, ಆರೋಪಿ ನಂ.2 ರವರು ತನಗೆ ಕಟ್ಟಿಗೆಯಿಂದ ಹೊಡೆದಿದ್ದಾನೆ, ಆರೋಪಿ ನಂ.5 ರವರು ಕಟ್ಟಿಗೆ ತೆಗೆದುಕೊಂಡು ಬಂದು, ರಂಗಣ್ಣ ನಾಯಕ ಚಪ್ಪಲಿ ತೆಗೆದುಕೊಂಡು ಬಂದರು, ತನಗೆ ವಾಸಪ್ಪ ರಂಗಪ್ಪ ನಾಯಕ ಚಪ್ಪಲಿಯಿಂದ ಹೊಡೆದಿದ್ದಾರೆ, ತಾನು ಎಚ್ಚರವಾಗಿ ನೇಲದ ಮೇಲೆ ಕುಳಿತಾಗಲೇ ತನಗೆ ಕಟ್ಟಿಗೆಯಿಂದ ಹೊಡೆದಿದ್ದಾರೆ, ಆರೋಪಿ ನಂ.1 ರವರು ಕಲ್ಲಿನಿಂದ ತಲೆಗೆ, ಎದೆಗೆ ಹಾಗೂ ಡುಬ್ಬಕ್ಕೆ ಹೊಡೆದಿದ್ದಾನೆ, ಆರೋಪಿ

ನಂ.3 ರವರು ತಲೆಗೆ ಎರಡು ಏಟು ಹೊಡೆದಿದ್ದಾನೆ, ರಂಗಪ್ಪ ನಾಯಕ ಬಡಿದಾಗ ತನಗೆ ಡುಬ್ಬಕ್ಕೆ ಮತ್ತು ಎದೆಗೆ ಹಾಗೂ ತಲೆಯ ಮುಂಭಾಗಕ್ಕೆ ಪೆಟ್ಟಾಗಿತ್ತು, ಸಮೀಪದಿಂದ ಬಡಿದಿದ್ದರಿಂದ ತಲೆಯ ಎರಡು ಕಡೆ ಗಾಯವಾಗಿತ್ತು, ಬಾಲಪ್ಪ ಅರಕೇರಿ, ರಂಗಪ್ಪ ಅರಕೇರಿ ಚಪ್ಪಲಿಯಿಂದ ಬೆನ್ನಿಗೆ ಹೊಡೆದಿದ್ದಾರೆ, ವಸಂತ ನಾಯಕ ಬಡಿಗೆಯಿಂದ ತನ್ನ ಬೆನ್ನಿಗೆ ಹೊಡೆದಿದ್ದಾನೆ, ನಂತರ 7-8 ಮಂದಿ ಈ ಮಗನನ್ನು ಬಿಡಬೇಡಿ ಅಂತಾ ಹೇಳಿದರು, ಆಗ ಅಲ್ಲಿಗೆ ಪೋಲಿಸರು ಬಂದಿದ್ದು, ತನ್ನನ್ನು ದವಾಖಾನೆಗೆ ಕರೆದುಕೊಂಡು ಹೋದರು, ಅವರು ತನ್ನನ್ನು ಬೈಯುತ್ತಿದ್ದರು, ತನ್ನ ಹೆಂಡತಿ ಪೋಲಿಸರಿಗೆ ಫೋನ ಹಚ್ಚಿ ಜಗಳದ ಬಗ್ಗೆ ತಿಳಿಸಿದ್ದರು, ಪೋಲಿಸರು ಬಂದಾಗ ಜಗಳ ಮುಗಿದು ಹೋಗಿತ್ತು, ನಂತರ ತನ್ನನ್ನು ಪೋಲಿಸರು ಕರೆದುಕೊಂಡು ಹೋದರು, ನಂತರ ರುಕ್ಮಾಬಾಯಿಯ ಮಗ ಬಂದು ರಂಗಪ್ಪ ನಾಯಕನನ್ನು ರಾಮಣ್ಣನಿಗೆ ಏಕೆ ಬಡಿದಿರಿ ಅಂತಾ ಕೇಳಿದಾಗ ಆತನನ್ನು ಸಹ ಬಡಿದಿದ್ದಾರೆ, ನಂತರ ಸುರೇಶನಿಗೂ ಕಲ್ಲಿನಿಂದ ಹಾಗೂ ಬಡಿಗೆಯಿಂದ ಆತನ ಎದೆಗೆ ಹೊಡೆದಿದ್ದಾರೆ, ಸ್ಥಳದಲ್ಲಿ ತನ್ನನ್ನು ಬಿಟ್ಟು ಬೇರೆ ಜನ ಸಹಿತ ಕೂಡಿದ್ದರು, ಜಗಳ ಬಿಡಿಸಲು ಬಂದ ವಿಠ್ಠಲ ಮಾದರ, ಕಾಡಪ್ಪ ಗೊಡಚಿ, ರಾಮಪ್ಪ ನಾಯಕ ಇವರನ್ನು ಸಹ ಆರೋಪಿಗಳು ಹೊಡೆದಿದ್ದಾರೆ, ಅವರುಗಳಿಗೆ ಯಾವುದೇ ಗಾಯವಾಗಿಲ್ಲ, ಸುರೇಶ ರಂಗಪ್ಪ ನಾಯಕನಿಗೆ ಪ್ರಜ್ಞೆ ಇರದ ಕಾರಣ ಆತನನ್ನು ಸಹಿತ ಪೋಲಿಸರು ತನ್ನೊಡನೇ ಕರೆದುಕೊಂಡು ಬಂದರು, ನಂತರ ಪೋಲಿಸರು ತನ್ನನ್ನು ಮತ್ತು ಸರೇಶನನ್ನು ರಮೇಶ ಪಾಟೀಲ ಇವರ ದವಾಖಾನೆಯಲ್ಲಿ ದಾಖಲಿಸಿದರು, ಲೋಕಾಪೂರ ಆಸ್ಪತ್ರೆಯಲ್ಲಿ ತಮ್ಮನ್ನು ತೋರಿಸಿಲ್ಲ, ಸುರೇಶನಿಗೆ ಎದೆಗೆ ಮತ್ತು ಬೆನ್ನಿಗೆ ಪೆಟ್ಟಾಗಿತ್ತು, ಪೋಲಿಸರು ದವಾಖಾಗೆ ಬಂದು ತಮ್ಮ ಹೇಳಿಕೆಗಳನ್ನು ಪಡೆದಿದ್ದಾರೆ, ಒಟ್ಟು ಎರಡು ಬಾರಿ ತನ್ನ ಹೇಳಿಕೆಯನ್ನು

ಪಡೆದಿದ್ದಾರೆ, ತಾನು 24 ಜನರ ಮೇಲೆ ಫಿರ್ಯಾದಿ ಕೊಟ್ಟಿದ್ದೇನೆ, ತಾನು 6 ಜನರ ಮೇಲೆ ಫಿರ್ಯಾದಿ ಕೊಟ್ಟಿಲ್ಲ, ತನ್ನ ಕೊರಳಲ್ಲಿನ ಬಂಗಾರ ಚೈನು ಕಳೆದು ಹೋಗಿದೆ, ಬಡಿದಾಟದಲ್ಲಿ ಅದು ಕೆಳಗಡೆ ಬಿದ್ದಿದ್ದು, ಆರೋಪಿತರು ತೆಗೆದುಕೊಂಡಿದ್ದಾರೋ ಅಥವಾ ಬೇರೆ ಯಾರು ತೆಗೆದುಕೊಂಡಿದ್ದಾರೋ ತನಗೆ ಗೊತ್ತಿಲ್ಲ, ತಾನು ಪೋಲಿಸರಿಗೆ ತನ್ನ ಚೈನು ಸಿಕ್ಕಿದೆ ಅಂತಾ ಹೇಳಿಲ್ಲ, ಮುಂದುವರೆದು ಆರೋಪಿತರು ತನಗೆ ಹೊಡಿಬಡಿ ಮಾಡಿದ್ದರೂ ಸಹಿತ ತಾನು ಅಡ್ಡಾಡುವ ಸ್ಥಿತಿಯಲ್ಲಿದ್ದೆ, ತಾನು ಫಿರ್ಯಾದಿ ಆರೋಪಿತರು ಕಲ್ಲಿನಿಂದ ತನ್ನ ತಲೆಯ ಮೇಲೆ ಹೊಡೆದಿದ್ದರಿಂದ ತಾನು ಜ್ಞಾನ ತಪ್ಪಿ ಬಿದ್ದಿರುತ್ತೇನೆ ಎಂದು ತನ್ನ ಫಿರ್ಯಾದಿಯಲ್ಲಿ ಬರೆಸಿರುತ್ತೇನೆ, ತನ್ನನ್ನು ದವಾಖಾನೆಗೆ ತಮ್ಮ ಮನೆಯಲ್ಲಿ ಕೆಲಸ ಮಾಡುವ ಶಂಕರಗೌಡ ಇವರು ಕರೆದುಕೊಂಡು ಬಂದಿದ್ದರು ಎಂದು ನುಡಿದು, ಉಳಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

**9.** ಪ್ರಾಸಾ-2 ಮತ್ತು 5 ಬಸವಸಂತ ಲಕ್ಷ್ಮಪ್ಪ ನಾಯಕ ಮತ್ತು ಕಾಡಪ್ಪ ತಿಮ್ಮಣ್ಣ ಗೊಡಚಿ ಇವರು ಗುನ್ನೆ ಸ್ಥಳ ಪಂಚನಾಮೆಯ ಪಂಚ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಸುಮಾರು 3 ವರ್ಷದ ಹಿಂದೆ ಮುಧೋಳದ ಸರ್ಕಾರಿ ಆಸ್ಪತ್ರೆಯಲ್ಲಿ ಬರೆದಿಟ್ಟ ಪಂಚನಾಮೆಗೆ ಲೋಕಾಪೂರ ಪೋಲಿಸರು ತಮ್ಮ ಸಹಿಗಳನ್ನು ಪಡೆದಿದ್ದಾರೆ, ಪೋಲಿಸರು ತಮ್ಮ ಸಮಕ್ಷಮ ಏನು ಜಪ್ತು ಮಾಡಿಲ್ಲ, ಪಂಚನಾಮೆ ಏತಕ್ಕಾಗಿ ಮಾಡಿದರು ಮತ್ತು ಏನನ್ನು ಬರೆದಿದ್ದಾರೆ ಅಂತಾ ಗೊತ್ತಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ನಿಶಾನೆ ಪಿ-2 ಗುನ್ನೆ ಸ್ಥಳ ಪಂಚನಾಮೆಯ ಪ್ರಕಾರ ಸಾಕ್ಷ್ಯವನ್ನು ನುಡಿಯದೇ ಇದ್ದ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಅಭಿಯೋಜನೆಯು ಸದರಿ ಸಾಕ್ಷಿದಾರರು

ಆರೋಪಿತರಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಎಂಬ ಸೂಚನೆಗೆ ಸದರಿ ಸಾಕ್ಷಿದಾರರು ನಿರಾಕರಿಸಿದ್ದಾರೆ.

**10.** ಪ್ರಾಸಾ-3 ರುಕ್ಮವ್ವಾ ರಂಗಪ್ಪ ನಾಯಕ ಗಾಯಾಳು ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಸುಮಾರು 2 ವರ್ಷಗಳ ಹಿಂದೆ ಮದ್ಯಾಹ್ನ 12.30 ಗಂಟೆ ಸುಮಾರಿಗೆ ಬಸುಗೌಡ ನಾಯಕ ಮತ್ತು ರಾಮಣ್ಣ ಮದ್ನೂರ ಇವರ ಮನೆಯ ಮುಂದೆ ಜಗಳವಾಯಿತು, ಆಸ್ತಿ ಸಂಬಂಧ ಜಗಳವಾಗಿದೆ, ಸರ್ವೇ ನಂಬರ ನೆನಪಿಲ್ಲ, ತಮಗೆ ಮತ್ತು ಆರೋಪಿ ನಂ.3 ರವರಿಗೆ ತಕರಾರು ಇತ್ತು, ಫಿರ್ಯಾದಿಗೆ ವಾಸುಗೌಡ ನಾಯಕ, ರಾಮಣ್ಣಾ ನಾಯಕ, ವಾಸನಗೌಡನ ಮಕ್ಕಳಾದ ಆರೋಪಿ ನಂ.2 ಮತ್ತು 4 ರವರು ಫಿರ್ಯಾದಿಗೆ ಹೊಡೆದಿದ್ದಾರೆ, ಆ ಸಮಯದಲ್ಲಿ ತಾನು ತಮ್ಮ ಮನೆಯಲ್ಲಿದ್ದೆ, ಉಳಿದವರು ಸಹಿತ ಫಿರ್ಯಾದಿಯ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಕೇಳಿದ್ದೇನೆ, ತಮ್ಮೂರ ವಿಠ್ಠಲ ಗುಡಿಯ ಹತ್ತಿರ ಬಂದು ತನ್ನ ಮಕ್ಕಳನ್ನು ತಾನು ಬಿಡಿಸಿಕೊಂಡೆ, ಫಿರ್ಯಾದಿಯನ್ನು ಸಹ ಬಿಡಿಸಿಕೊಂಡೆ, ಆರೋಪಿತರು ಕೆಲವೊಬ್ಬರು ಕೈಯಿಂದ, ಕಟ್ಟಿಗೆಯಿಂದ, ಚಪ್ಪಲಿಯಿಂದ ಹೊಡೆದಿದ್ದಾರೆ, ಗದ್ದಲದಲ್ಲಿ ಯಾರು ಯಾರಿಗೆ ಎಲ್ಲಿ ಹೊಡೆದಿದ್ದಾರೆ ಅಂತಾ ಹೇಳಲು ಬರುವುದಿಲ್ಲ, ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಾಡಿದ್ದಾರೆ, ಆ ಸಮಯದಲ್ಲಿ ಪೋಲಿಸರು ಅಲ್ಲಿಗೆ ಬಂದು ಬಿಡಿಸಿಕೊಂಡವರನ್ನು ಕರೆದುಕೊಂಡು ಹೋದರು, ತನಗೂ ಬಡೆದಿದ್ದಾರೆ, ತನ್ನ ತಲೆಗೆ, ಬಲಗೈಗೆ ಬಡಿದಿದ್ದಾರೆ, ತಾನು ರಮೇಶ ಪಾಟೀಲ ವೈದ್ಯರ ಹತ್ತಿರ ತೋರಿಸಿಕೊಂಡಿದ್ದೇನೆ, ರಮೇಶ ಪಾಟೀಲ ವೈದ್ಯರ ಹತ್ತಿರ ಹೋಗುವುದಕ್ಕಿಂತ ಮೊದಲು ತಾನು ಎಲ್ಲಿಯೂ ತೋರಿಸಿಕೊಂಡಿಲ್ಲ, ಜಗಳ ಬೆಳಿಗ್ಗೆ 10.00 ರಿಂದ 11.00 ಗಂಟೆಗೆ ಆಗಿದೆ, ಫಿರ್ಯಾದಿಯನ್ನು ಫಿರ್ಯಾದಿ ರಾಮಣ್ಣ ಕೊಟ್ಟಿದ್ದಾನೆ, ಚಾಸಾ-5 ಮತ್ತು

6 ರವರಿಗೆ ಹೊಡೆದಿದ್ದಾರೆ, ಅವರಿಗೂ ಪೆಟ್ಟಾಗಿದೆ, ರಮೇಶನ ಡುಬ್ಬಕ್ಕೆ ಹೊಡೆದಿದ್ದಾರೆ, ಈ ರೀತಿ ಆಗಿತ್ತು ಎಂದು ತಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ, ಆರೋಪಿತರು ತನಗೆ ಜೀವದ ಬೆದರಿಕೆ ಹಾಕಿದ್ದಾರೆಂದು ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರಿಗೆ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಅವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಮತ್ತು ತನ್ನ ಮಗಳು ಕೂಡಿ ಆರೋಪಿತರ ಮೇಲೆ ಪಾಲ್ಕಿಮಾನ್ಯದಲ್ಲಿರುವ ಜಮೀನು ರಿ.ಸ.ನಂ.62/6, 62/7 ಗೆ ಸಂಬಂಧಪಟ್ಟಂತೆ ಅಸಲ ದಾವೆ ನಂ.74/2008 ಹೆಚ್ಚುವರಿ ದಿವಾಣಿ ನ್ಯಾಯಾಧೀಶರು, ಮುಧೋಳ ಇವರ ಮುಂದೆ ಮಾಡಿದ್ದೇವೆ, ಪಾಲ್ಕಿಮಾನ್ಯ ಮುಧೋಳ ತಾಲೂಕಿನಲ್ಲಿ ಬರುತ್ತದೆ, ತಾನು ಕಾಡರಕೊಪ್ಪದಲ್ಲಿ ವಾಸವಾಗಿರುತ್ತೇನೆ, ಅದು ಬದಾಮಿ ತಾಲೂಕಿನಲ್ಲಿ ಬರುತ್ತದೆ, ಸರ್ವೇ ನಂ.62/6 ಮತ್ತು 62/7 ಕಾಡರಕೊಪ್ಪ ಗ್ರಾಮದಿಂದ ಒಂದುವರೆ ಕಿ.ಮೀ. ಅಂತರದಲ್ಲಿ ಇದೆ ಎನ್ನುವ ಪ್ರಶ್ನೆಗೆ ಒಂದುವರೆ ಕಿ.ಮೀ. ಒಳಗಡೆ ಇದೆ ಎಂದು ಹೇಳಿದ್ದಾರೆ, ತಮ್ಮ ಮನೆಯ ತಮ್ಮೂರ ಪಾಂಡುರಂಗ ದೇವಸ್ಥಾನದಿಂದ ಬಹಳ ಒಳಗಡೆ ಇದೆ, ತಮ್ಮ ಮನೆಯಿಂದ ತಾನು ಮೇಲೆ ಹೇಳಿದ ಜಮೀನಗೆ ಹೋಗಬೇಕಾದರೆ ಅರ್ಧ ಗಂಟೆ ಬೇಕಾಗುತ್ತದೆ, ಗಲಾಟೆಯಾದಾಗ ತಾನು ಮನೆಯಲ್ಲಿದ್ದೆ, ಹೊರಗಡೆ ಜಗಳದ ಬಾಯಿ ಶಬ್ದ ಕೇಳಿದ್ದರಿಂದ ಮನೆಯಿಂದ ವಿಠ್ಠಲ ದೇವರ ಗುಡಿಗೆ ಹೋದೆನು, ಕಾಡರಕೊಪ್ಪ ಗ್ರಾಮದಲ್ಲಿರುವ ವಿಠ್ಠಲ ದೇವರ ಗುಡಿಯ ಹತ್ತಿರ ಹೋದಾಗ ಅಲ್ಲಿ ಬಹಳ ಜನ ಕೂಡಿದ್ದರು, ತಮ್ಮ ಮನೆಯಿಂದ ನಿಂತು ನೋಡಿದರೆ ವಿಠ್ಠಲ ಮಂದಿರ ಕಾಣಿಸುವುದಿಲ್ಲ, ತಮ್ಮ ಮನೆಯಿಂದ ವಿಠ್ಠಲ ದೇವರ ಗುಡಿಗೆ ಹೋಗಲು 5 ನಿಮೀಷ ಬೇಕಾಗುತ್ತದೆ, ಅಲ್ಲಿ ಬಹಳ ಜನ ಸೇರಿದ್ದರಿಂದ ಅವರು ಯಾರು ಎಂದು ತನಗೆ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ, ಅಲ್ಲಿ

ಊರಿನ ಜನರೆಲ್ಲಾ ಸೇರಿದ್ದರು, ಆರೋಪಿತರು ಸಹ ಕಾಡರಕೊಪ್ಪದವರು, ಆರೋಪಿತರು ತಮ್ಮೂರಿನವರಾಗಿದ್ದರಿಂದ ತನಗೆ ಅವರ ಪರಿಚಯವಿದೆ, ದೂರಿನ ಮನುಷ್ಯರು ತನಗೆ ಕಾಣಿಸುತ್ತಾರೆ, ಫಿರ್ಯಾದಿಯ ಮನೆ ಪಾಲ್ಕಿಮಾನ್ಯದಲ್ಲಿ ಬರುತ್ತದೆ, ತಮ್ಮ ಮನೆಯಿಂದ ಫಿರ್ಯಾದಿ ಮನೆ ದೂರವಾಗುತ್ತದೆ, ತಮ್ಮ ಮನೆಯಿಂದ ಸರ್ವೇ ನಂಬರ 62/6 ಮತ್ತು 62/7 ಕಾಣಿಸುವುದಿಲ್ಲ ಮತ್ತು ಅಲ್ಲಿ ಗಲಾಟೆಯಾದರೆ ಕೇಳಿಸುವುದಿಲ್ಲ, ಫಿರ್ಯಾದಿಯ ಮನೆಯ ಮುಂದೆ ಜಗಳವಾಗಿದ್ದು, ಆತನನ್ನು ಮತ್ತು ತನ್ನ ಮಕ್ಕಳನ್ನು ವಿಠ್ಠಲ ದೇವರ ಗುಡಿಯ ಹತ್ತಿರ ಎಳೆದುಕೊಂಡು ಬಂದಿದ್ದಾರೆ, ತನಗೆ ದಿಕ್ಕುಗಳು ಗೊತ್ತಾಗುವುದಿಲ್ಲ, ಸುತ್ತಮುತ್ತ ಏನು ಇದೆ ಎಂದು ಗೊತ್ತಿಲ್ಲ, ಆರೋಪಿತರ ಮತ್ತು ತಮ್ಮ ನಡುವೆ ಮನಸ್ಸು ಸರಿ ಇಲ್ಲ, ವಿಠ್ಠಲ ದೇವರ ಗುಡಿಯ ಹತ್ತಿರ ಹೊಡೆದಿದ್ದಾರೆ, ತನ್ನ ಮಕ್ಕಳಿಗೂ ಹೊಡೆದಿದ್ದಾರೆ, ಫಿರ್ಯಾದಿ ಮತ್ತು ತನ್ನ ಮಕ್ಕಳಿಗೆ ಗುಡಿಯ ಹತ್ತಿರ ಊರಿನವರು ಬಡಿಗೆ ಮತ್ತು ಚಪ್ಪಲ ತೆಗೆದುಕೊಂಡು ಬಡಿದಿದ್ದಾರೆ, ಪಾಲ್ಕಿಮಾನ್ಯರಲ್ಲಿರುವ ಸರ್ವೇ ನಂ.62/6 ಮತ್ತು 62/7 ಜಮೀನು ಬಿಟ್ಟು ಅನವಾಲ ಗ್ರಾಮದಲ್ಲಿ 17 ಎಕರೆ ಜಮೀನು ಇದೆ ಎಂದು ನುಡಿದು, ಉಳಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

**11.** ಪ್ರಾಸಾ-4 ರಾಮಪ್ಪ ರಂಗಪ್ಪ ನಾಯಕ ಇವರು ಸಹ ಗಾಯಾಳು ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಫಿರ್ಯಾದಿಯನ್ನು ರಾಮಣ್ಣ ಕೊಟ್ಟಿದ್ದಾನೆ, ವಾಸುಗೌಡ ಭೀಮನಗೌಡ ನಾಯಕರವರಿಗೆ ತಾನು ಜಮೀನು ಕೊಟ್ಟು 14 ವರ್ಷಗಳಾಯಿತು, ತನ್ನ ತಂದೆ ತೀರಿಕೊಂಡ ಮೇಲೆ ತಾನು ಮತ್ತು ತನ್ನ ತಮ್ಮ, ತನ್ನ ತಂದೆಯ ಹಸರಿನಲ್ಲಿದ್ದ ಜಮೀನವನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡು ನಂತರ ವಾಸುಗೌಡ ಭೀಮನಗೌಡ ನಾಯಕ ಇವರಿಗೆ ಮಾರಿದ್ದೇವು, ಆಗ ತನ್ನ ತಂಗಿ ತನ್ನ ಸಹಿ

ಇರಲಾರದೇ ಹೇಗೆ ಮಾರಿದ್ದೀಯಾ ಅಂತಾ ಕೋರ್ಟಗೆ ಕೇಸ ಹಾಕಿದಳು, ಕಾರಣ 24 ಜನ ಫಿರ್ಯಾದಿಗೆ ನೀನೇ ಅವರಿಗೆ ಕಲಿಸಿದ್ದೀಯಾ ಅಂತಾ ಸದಾಶೀವ ಮಠದ ಹತ್ತಿರ ಬಡಿದರು, ಆಗ ಬಡಿಗೆ ಮತ್ತು ಕಲ್ಲನ್ನು ಜನರು ತೆಗೆದುಕೊಂಡು ಬಂದಿದ್ದರು, ಬಂದವರೇ ಫಿರ್ಯಾದಿಗೆ ಹೊಡೆಯಲು ಚಾಲು ಮಾಡಿದರು, ಸುರೇಶ ನಾಯಕ ಎನ್ನುವವನಿಗೆ ಪೆಟ್ಟಾಗಿ ಮುಂದೆ ಆತ ತೀರಿಕೊಂಡ, ರಾಮಪ್ಪ ರಂಗಪ್ಪ ನಾಯಕ ಎನ್ನುವವರು ತನಗೆ ಬಡಿಗೆಯಿಂದ ತಲೆಗೆ ಹೊಡೆದಿದ್ದಾರೆ, ರಕ್ತಗಾಯವಾಗಿದ್ದರಿಂದ ದವಾಖಾನೆಗೆ ತೋರಿಸಲಾಗಿದೆ, ಅಲ್ಲದೇ ರುಕ್ಕವ್ವಳಿಗೆ, ಕಾಶೀಬಾಯಿ ಇವರಿಗೂ ಸಹ ಹೊಡೆದಿದ್ದಾರೆ, ಅವರೆಲ್ಲರನ್ನು ಮುಧೋಳದ ಪಾಟೀಲ ದವಾಖಾನೆಗೆ ತೋರಿಸಲಾಯಿತು, ವಾಸುಗೌಡ ಮತ್ತು ರಂಗಪ್ಪಾ ಇವರು ಕೂಡಿ ಫಿರ್ಯಾದಿಗೆ ಕಿವಿಗೆ ಮತ್ತು ಎಡಭುಜಕ್ಕೆ ಬಡಿದಿದ್ದಾರೆ ಹಾಗೂ ಕಾಶಿಬಾಯಿ ಇವಳಿಗೆ ರಂಗಪ್ಪ ನಾಯಕ ಇವರು ಬಡಿಗೆಯಿಂದ ಬಡಿದಿದ್ದಾರೆ, ತಮ್ಮೂರಿಗೆ ಬಂದು ಪೋಲಿಸರು ತನ್ನ ಹೇಳಿಕೆಯನ್ನು ಪಡೆದಿದ್ದಾರೆ, ಮುಂದುವರೆದು ತಾನು ಫಿರ್ಯಾದಿಯ ಮನೆಗೆ ಹೊರಟಾಗ ಜಗಳ ನಡೆದಿದ್ದನ್ನು ನೋಡಿದ್ದೇನೆ, ತಾನು, ರವಿ ನಾಯಕ, ಕಾಡು ಬುದ್ನಿ ಮತ್ತು ಇನ್ನೊಬ್ಬರು ಕೂಡಿಕೊಂಡು ಜಗಳ ಬಿಡಿಸಿದೇವು, ತಾನು ಲೋಕಾಪೂರ ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿಕೊಂಡಿದ್ದೇನೆ, ಫಿರ್ಯಾದಿ ಮತ್ತು ಸುರೇಶ ನಾಯಕರನ್ನು ತಾನು ಮುಧೋಳದ ನಾಯಕ ದವಾಖಾನೆಗೆ ಕರೆದುಕೊಂಡು ಬಂದಿದ್ದೇನೆ, ಆ ದಿನ 24 ಜನ ಬಂದಿದ್ದರು, ಪೋಲಿಸರು ತನ್ನ ಹೇಳಿಕೆಯನ್ನು ಲೋಕಾಪೂರ ಪೋಲಿಸ ಠಾಣೆಯಲ್ಲಿ ಪಡೆದಿದ್ದಾರೆ, ವಾಸುಗೌಡ ಹಾಗೂ ಇತರರು ನಿಮ್ಮನ್ನು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾರೆ, ಘಟನೆಗೆ ಉಪಯೋಗಿಸಿದ ಮು.ಮಾ.1 ರಿಂದ 11 ಕಲ್ಲು, ಬಡಿಗೆ ಹಾಗೂ ಶರ್ಟನ್ನು ನೋಡಿ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರಿಗೆ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಅವರು ತಮ್ಮ ಪಾಟೀ ಸವಾಲಿನಲ್ಲಿ ಫಿರ್ಯಾದಿ ತನಗೆ 10 ವರ್ಷಗಳಿಂದ ಪರಿಚಯವಿರುತ್ತಾನೆ, ಫಿರ್ಯಾದಿ ಮೂಲತ: ತಮ್ಮರಿನವನಲ್ಲ, ಆಸ್ತಿ ಹಿಡಿದು ತಮ್ಮ ಊರಿಗೆ ಬಂದಿದ್ದಾರೆ, ರಾಮಣ್ಣ ತಮ್ಮ ಸಂಬಂದಿಕನಲ್ಲಿ, ರಾಮಣ್ಣನ ಸಂಬಂಧಿಕರು ಕಾಡರಕೊಪ್ಪದಲ್ಲಿ ಇದ್ದಾರೆ, ಫಿರ್ಯಾದಿ ತಮ್ಮೂರಿನಲ್ಲಿ ಹಿರಿತನ ಮಾಡುವುದಿಲ್ಲ, ಜಗಳ ಬಂದರೆ ಅವರ ಜೊತೆ ನ್ಯಾಯಾಲಯಕ್ಕೆ ಹೋಗುವುದಿಲ್ಲ, ಫಿರ್ಯಾದಿ ತನ್ನ ತಾಯಿ ಮತ್ತು ತನ್ನ ತಂಗಿಗೆ ಕಲಿಸಿ ನ್ಯಾಯ ಮಾಡುತ್ತಾನೆಂದು ಆತನ ಜೊತೆ ಆರೋಪಿತರು ಜಗಳ ಮಾಡಿದ್ದಾರೆ, ಆರೋಪಿತರ ಮೇಲೆ ತನ್ನ ತಾಯಿ ಮತ್ತು ತನ್ನ ತಂಗಿ ದಾವಾ ಮಾಡಿದ್ದಾರೆ, ಆ ದಾವೆಯಲ್ಲಿ ವಾಸುಗೌಡ ನಾಯಕ, ರಂಗಪ್ಪ ನಾಯಕ, ಗಂಗಪ್ಪಾ ಅರಕೇರಿ, ಅವರುಗಳ ಮೇಲೆ ಕೇಸು ಮಾಡಲಾಗಿದೆ, ಆ ದಾವೆಯಲ್ಲಿ ತನಗೂ ನೋಟಿಸ ಬಂದಿದೆ, ಸದರಿ ದಾವೆಯಲ್ಲಿ ತಾನು ಮತ್ತು ತನ್ನ ತಾಯಿ ವಕೀಲರನ್ನು ಕೊಟ್ಟು ಹಾಜರಾಗಿದ್ದೇವೆ, ತನ್ನ ತಾಯಿ ಮಾಡಿದ ದಾವೆ ನಂ.74/2008 ಇತ್ತು, ಸದರಿ ದಾವೆಗಿಂತ ಮೊದಲು ಚಂದ್ರವ್ವಾ ಮಡಿವಾಳರ, ಹಣಮವ್ವ ಮಡಿವಾಳರ ಇವರ ನಡುವೆ ದಾವೆ ನಡೆದಿತ್ತು, ಆ ದಾವೆಯಲ್ಲಿ ತಾನು ಮತ್ತು ತನ್ನ ತಮ್ಮ ಚನ್ನಪ್ಪ ಮಡಿವಾಳರವರಿಗೆ ಬಕ್ಸಿಸ ಪತ್ರ ಮಾಡಿದ ಆಸ್ತಿ ಸಹಿತ ಸೇರಿದೆ, ಆ ದಾವೆಯಲ್ಲಿ ತಾವು ಚನ್ನಪ್ಪ ಮಡಿವಾಳರವರು ತಮ್ಮ ಮನೆತನದ ಸೇವೆ ಮಾಡುತ್ತಿದ್ದರು, ಕಾರಣ ಬಕ್ಸಿಸ ಕೊಟ್ಟಿದ್ದೇವೆ, ಈ ವಿಷಯ ತನ್ನ ತಾಯಿಗೆ ಗೊತ್ತಿದೆ, ಬಕ್ಸಿಸ್ ಮಾಡಿದ್ದು, ತನ್ನ ತಾಯಿಗೆ ಗೊತ್ತಿಲ್ಲ, ತಾವು ಬಕ್ಸಿಸ ಮಾಡಿದ ಜಮೀನು ಸರ್ವೆ ನಂ.62/7 ನೇದ್ದು ಮಡಿವಾಳರವರ ಕಬ್ಜೆಯಲ್ಲಿದೆ, ಆರೋಪಿತರು ಸರ್ವೆ ನಂ.62/7 ನೇದ್ದರಲ್ಲಿ ಬೇರೆ ಬೇರೆ ಪ್ಲಾಟಗಳನ್ನು ಖರೀದಿ ಮಾಡಿದ್ದಾರೆ, ಮುಧೋಳ ತಾಲೂಕಿನಲ್ಲಿ ಕಾಡರಕೊಪ್ಪ ಗ್ರಾಮ

ಇಲ್ಲ, ಜಗಳ ಫಿರ್ಯಾದಿಯ ಮನೆಯ ಮುಂದೆ ಆಗಿದೆ, ಆಸ್ತಿ ಮುಧೋಳ ತಾಲೂಕಿನಲ್ಲಿ ಬರುತ್ತಿದ್ದು, ಮನೆ ಕಾಡರಕೊಪ್ಪದಲ್ಲಿದೆ, ರಾಮಣ್ಣನ ಹೆಸರಿನಲ್ಲಿರುವ ಮನೆ ನಂಬರ ಹೇಳಲಾಗುವುದಿಲ್ಲ, ರಾಮಣ್ಣನ ಮನೆ ಆಜುಬಾಜು ತಮ್ಮ ಮನೆ ಇಲ್ಲ, ತಮ್ಮ ಮನೆ ಹಳ್ಳ ದಾಟಿ ಕಾಡರಕೊಪ್ಪ ಗ್ರಾಮದಲ್ಲಿದೆ, ತಮ್ಮ ಮನೆ ರಾಮಣ್ಣನ ಮನೆಯಿಂದ ಅರ್ಧ ಕಿ.ಮೀ. ಗಿಂತ ಸ್ವಲ್ಪ ಕಡಿಮೆ ಆಗುತ್ತದೆ, ತಾವು ರಾಮಣ್ಣನ ಮನೆಗೆ 8.00 ರಿಂದ 8.30 ಗಂಟೆಯ ಸುಮಾರಿಗೆ ಬಂದೇವು, ದಿನಾಂಕ ನೆನಪಿಲ್ಲ, ಆ ದಿನ ತಾವು ಸದಾಶೀವಪ್ಪನ ಗುಡಿಗೆ ಬಂದಿದ್ದೇವು, ಫಿರ್ಯಾದಿಯ ಮೆನಯಿಂದ ಸದರಿ ಗುಡಿ 100 ಫೀಟ ಇದೆ, ಸದರಿ ಗುಡಿಯಿಂದ ಹಳ್ಳದ ಮದ್ಯ ಇರುವ ಸ್ಥಳದಲ್ಲಿ ಲೋಕಾಪೂರದಿಂದ ಕಾಡರಕೊಪ್ಪಕ್ಕೆ ಹೋಗುವ ದೊಡ್ಡ ರಸ್ತೆ, ರಾಮಣ್ಣನ ಮನೆ ರಸ್ತೆಗೆ ಹೊಂದಿಕೊಂಡಿಲ್ಲ, ಒಳಗಡೆ ಇದೆ, ದಿನಾಲೂ ಗುಡಿಗೆ ಹೋಗುತ್ತೇನೆ, ಗುಡಿಯ ಹತ್ತಿರ ನಿಂತರೇ ಫಿರ್ಯಾದಿಯ ಮನೆಯ ಮುಂದೆ ಏನು ನಡೆದಿದೆ ಅಂತಾ ಕಾಣುವುದಿಲ್ಲ, ದೇವಸ್ಥಾನದಲ್ಲಿ ತಾನು ಕೇವಲ ನಮಸ್ಕಾರ ಮಾಡಲು ಬಂದಿದ್ದೆ, ತಾನು ಗುಡಿಯಲ್ಲಿ ನಮಸ್ಕಾರ ಮಾಡುವಾಗ ಯಾರೂ ಇರಲಿಲ್ಲ, ತಾನು ರಾಮಣ್ಣನ ಮನೆ ಕಡೆ ಹೋದಾಗ ಅಲ್ಲಿ ರಾಮಣ್ಣನಿಗೆ ಬಡಿಯುತ್ತಿದ್ದರು, ಆರೋಪಿ ನಂ.1 ರಂಗಪ್ಪ ನಾಯಕ, ವೆಂಕಪ್ಪ ನಾಯಕ, ಕೃಷ್ಣಪ್ಪ ನಾಯಕ, ವಾಸುಗೌಡ ನಾಯಕ ಇವರುಗಳ ಕೈಯಲ್ಲಿ ಬಡಿಗೆ ಇದ್ದವು, ಒಬ್ಬರಾದ ಮೇಲೆ ಒಬ್ಬರು ಬಡಿಗೆಯಿಂದ ಬಡಿದಿದ್ದಾರೆ, ರಂಗಣ್ಣ ನಾಯಕ ಮತ್ತು ವಾಸುಗೌಡ ನಾಯಕ ಕಿವಿಗೆ ಬಲಗಡೆ ಬಡಿದಿದ್ದರಿಂದ ಕಿವಿಗೆ ರಕ್ತಗಾಯವಾಯಿತು, ವಾಸುಗೌಡ ಎಡಗಡೆ ಡುಬ್ಬಕ್ಕೆ ಬಡಿದ, ಕೃಷ್ಣಪ್ಪ ಬೆನ್ನಿಗೆ ಬಡಿದಿದ್ದಾರೆ, ನಾಲ್ಕು ಜನ ಬಡಿಗೆಯಿಂದ ಬಡಿಯುವಾಗ ತಾನು ಬಿಡಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೆ, ತಾನು ರಮೇಶ ನಾಯಕ, ಕಾಡಪ್ಪ ಬುದ್ನಿ ಮತ್ತು

ಇನ್ನು ಇಬ್ಬರು ಕೂಡಿ ಬಿಡಿಸಿಕೊಂಡೇವು, ರಾಮಣ್ಣನನ್ನು ಎಲ್ಲರೂ ಕೂಡಿ ಹಿಡಿದುಕೊಂಡು ಬಿಡಿಸಿಕೊಂಡೇವು, ಅಷ್ಟಕ್ಕೆ ಅವರು ರಾಮಣ್ಣನ್ನು ಹೊಡೆಯುವುದು ಬಿಟ್ಟರು, ಹೆದರಿಕೆ ಹಾಕಿದರು, ರಾಮಣ್ಣನನ್ನು ಬಿಡಿಸಿಕೊಳ್ಳುವಾಗ ವಾಸುಗೌಡ ನಾಯಕ ತನ್ನ ಬೆನ್ನಿಗೆ ಬಡಿದರು, ತನಗೂ ಸಹಿತ ಅದೇ ಬಡಿಗೆಯಿಂದ ಬಡಿದರು, ವಾಸುಗೌಡ ನಾಯಕ ರುಕ್ಮವ್ವ ಇವಳಿಗೆ ಬಡಿದಿದ್ದಾರೆ, ತಮ್ಮ ತಂಗಿ ಅಲ್ಲೇ ಇದ್ದು, ಆಕೆಗೂ ಸಹಿತ ಬಡಿದಿದ್ದಾರೆ, ತನ್ನ ತಂಗಿಗೆ ರಂಗಪ್ಪ ನಾಯಕ ಬಡಿದಿದ್ದಾರೆ ಬಡಿಗೆಯಿಂದ ಬಡಿದಿದ್ದಾರೆ, ಆದರೆ ಕಾಶಿಬಾಯಿಗೆ ಪೆಟ್ಟಾಗಿರಲಿಲ್ಲ, ರುಕ್ಮವ್ವಗೆ ಮತ್ತು ತನಗೆ ಪೆಟ್ಟಾಗಿತ್ತು, ತಾನು ಲೋಕಾಪೂರ ಸರ್ಕಾರಿ ದವಾಖಾನೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ, ರುಕ್ಮವ್ವಗೆ ಮೈಮೇಲೆಲ್ಲಾ ಹಾಗೂ ಸೀರೆಯೆಲ್ಲಾ ರಕ್ತವಾಗಿತ್ತು, ಸುರೇಶ ನಾಯಕ ಸಹಿತ ಘಟನೆಯಾದಾಗ ಆತ ಅಲ್ಲಿಯೇ ಇದ್ದು, ಆತನನ್ನು ಸಹ ಬಡಿದಿದ್ದಾರೆ, ಸುರೇಶ ನಾಯಕನಿಗೆ ರಂಗಪ್ಪ ನಾಯಕ ಕಲ್ಲಿನಿಂದ ಹೊಟ್ಟೆಗೆ ಗುದ್ದಿದ್ದಾನೆ, ಭೀಮನಗೌಡ ನಾಯಕ ಬಡಿಗೆಯಿಂದ ಬೆನ್ನಿಗೆ ಬಡಿದಿದ್ದಾನೆ, ಲೋಕಾಪೂರ ದವಾಖಾನೆಯಲ್ಲಿ ಸುರೇಶನನ್ನು ಹಿಡಿಯಲಿಲ್ಲವಾದ ಕಾರಣ ಮುಧೋಳ ದವಾಖಾನೆಗೆ ಸೇರಿಸಲಾಯಿತು, ತನ್ನ ತಮ್ಮ ಘಟನೆಯಾಗಿ 6 ತಿಂಗಳಾದ ಮೇಲೆ ಸುರೇಶ ತೀರಿಕೊಂಡ, ಮುಧೋಳದಲ್ಲಿ ಬಿಟ್ಟು ಬೇರೆ ಕಡೆ ತೋರಿಸಿಲ್ಲ, ಫೀರ್ಯಾದಿಯ ಹೆಂಡತಿ ಪೋಲಿಸ ಠಾಣೆಗೆ ಫೋನ ಮಾಡಿ ತಿಳಿಸಿದ್ದಾಳೆ, ರುಕ್ಮವ್ವ ತನ್ನ ತಾಯಿ, ಆ ದಿನ ರಾಮಣ್ಣನ ಹೆಂಡತಿ ಅನಸವ್ವ ಮನೆಯಲ್ಲಿದ್ದಳು, ಫೀರ್ಯಾದಿಯ ಹೆಂಡತಿ ಅನಸವ್ವಾ ಮನೆಯಿಂದ ಹೊರಗಡೆ ಬಂದು ಫಿರ್ಯಾದಿಯನ್ನು ಬಿಡಿಸಿಕೊಂಡಿದ್ದಾಳೆ, ಫಿರ್ಯಾದಿಯ ಹೆಂಡತಿಗೆ ಗಲಾಟೆಯಲ್ಲಿ ಪೆಟ್ಟಾಗಿಲ್ಲ, ಆಕೆಗೆ ಆರೋಪಿತರು ಯಾರು ಬಡಿದಿಲ್ಲ, ಪೋಲಿಸರು ಸುದ್ದಿ ಮುಟ್ಟಿದ ತಕ್ಷಣ ಸ್ಥಳಕ್ಕೆ ಬಂದಿದ್ದು, ಅಲ್ಲಿ ಸುರೇಶ ಇವನು ಕೆಳಗೆ ಬಿದ್ದಿದ್ದ, ಆರೋಪಿತರು ಅಲ್ಲಿಯೇ

ಇದ್ದರು, ಆರೋಪಿತರು ಯಾರು ಸ್ಥಳದಿಂದ ಓಡಿ ಹೋಗಲು ಪ್ರಯತ್ನ ಮಾಡಿಲ್ಲ, ಪೋಲಿಸರು ತನ್ನನ್ನು ತಮ್ಮ ತಾಯಿಯನ್ನು ಹಾಗೂ ತನ್ನ ತಮ್ಮ ಸುರೇಶನನ್ನು ಪೋಲಿಸ ಠಾಣೆಗೆ ಕರೆದುಕೊಂಡು ಬಂದರು, ಪೋಲಿಸ ಠಾಣೆಯಲ್ಲಿ ತಾನು ಫಿರ್ಯಾದಿಯನ್ನು ಕೊಟ್ಟಿದ್ದೇನೆ, ತಮ್ಮ ಫಿರ್ಯಾದಿ ತೆಗೆದುಕೊಂಡ ಮೇಲೆ ದವಾಖಾನೆಗೆ ಕಳುಹಿಸಿಕೊಟ್ಟರು, ಆಸ್ಪತ್ರೆಗೆ ಪೋಲಿಸರು ಬಂದಿದ್ದರು, ಅವರು ಯಾರು ಎಂದು ಗೊತ್ತಿಲ್ಲ, ತಾನು ತಾಯಿಯನ್ನು ಮತ್ತು ಸುರೇಶನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು, ಪೋಲಿಸರು ತಮ್ಮ ರಕ್ಷಣೆಗಾಗಿ 4 ಜನರನ್ನು ಆಸ್ಪತ್ರೆಗೆ ಬಿಟ್ಟಿದ್ದರು, ನಾಯಕ ಆಸ್ಪತ್ರೆಯಲ್ಲಿದ್ದಾಗ ತಮ್ಮನ್ನು ಪೋಲಿಸರು ಕಾಯುತ್ತಿದ್ದರು, ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 5 ಬಡಿಗೆಗಳು ಸಾಮಾನ್ಯವಾಗಿ ತಮ್ಮ ಮನೆಯ ಮುಂದೆ ಇರುತ್ತವೆ ಹಾಗೂ ಮು.ಮಾ.6 ರಿಂದ 10 ಕಲ್ಲುಗಳು ತಮ್ಮ ಮನೆಯಲ್ಲಿ ಸಾಕಷ್ಟು ಇವೆ ಎಂದು ನುಡಿದು, ಉಳಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

**12.** ಪ್ರಾಸಾ-9 ವಿಠ್ಠಲ ಕಲ್ಲಪ್ಪ ಗಚ್ಚಪ್ಪಗೋಳ ಇವರು ಪ್ರತ್ಯಕ್ಷ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತನಗೆ ಈ ಕೇಸಿನ ಫಿರ್ಯಾದಿದಾರರು ಗೊತ್ತು, ತಾನು ಅವರ ಬಳಿಗೆ ಕೆಲಸಕ್ಕೆ ಹೋಗುತ್ತಾ ಇದ್ದೆ, ತನಗೆ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿರುವುದಿಲ್ಲ, ತಾನು ಅವರನ್ನು ಎಲ್ಲಿ ನೋಡಿರುವುದಿಲ್ಲ, ತಾನು ಫಿರ್ಯಾದಿದಾರರ ಮತ್ತು ಆರೋಪಿತರ ನಡುವೆಯಾದ ಜಗಳ ನೋಡಿಲ್ಲ, ತನ್ನ ಸಮಕ್ಷಮ ಅವರಿಬ್ಬರ ನಡುವೆ ಯಾವುದೇ ಜಗಳವಾಗಿಲ್ಲ, ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ, ತನಗೆ ಈ ಕೇಸಿನ ಯಾವುದೇ ವಿಚಾರ ಗೊತ್ತಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ

ಸಾಕ್ಷಿದಾರರು ನಿಶಾನೆ ಪಿ-8 ಹೇಳಿಕೆ ಪ್ರಕಾರ ಸಾಕ್ಷ್ಯವನ್ನು ನುಡಿಯದೇ ಇದ್ದ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಅಭಿಯೋಜನೆಯು ಸದರಿ ಸಾಕ್ಷಿದಾರರು ಆರೋಪಿತರಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಎಂಬ ಸೂಚನೆಗೆ ಸದರಿ ಸಾಕ್ಷಿದಾರರು ನಿರಾಕರಿಸಿದ್ದಾರೆ.

**13.** ಪ್ರಾಸಾ-11 ಶಂಕರಗೌಡ ಯಮನಪ್ಪಗೌಡ ಪಾಟೀಲ ಇವರು ಸಹ ಪ್ರತ್ಯಕ್ಷ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತಾನು ಯಾವುದೇ ಗಲಾಟೆ ನೋಡಿ ಬಿಡಿಸಿಲ್ಲ, ತನ್ನ ಸಮಕ್ಷಮ ಯಾವುದೇ ಜಗಳವಾಗಿಲ್ಲ, ಯಾರು ಯಾರಿಗೆ ಹೊಡಿಬಡಿ ಮಾಡಿದರು ತನಗೆ ಗೊತ್ತಿಲ್ಲ, ತನ್ನ ಸಮಕ್ಷಮ ಯಾರೂ ಯಾರಿಗೆ ಬಡಿಗೆಯಿಂದ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಜೀವ ಬೆದರಿಕೆ ಹಾಕಿಲ್ಲ, ತಾನು ಯಾವುದೇ ಜಗಳವನ್ನು ಕಣ್ಣಾರೆ ನೋಡಿಲ್ಲ, ತಾನು ಪೋಲಿಸರಿಗೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ನಿಶಾನೆ ಪಿ-11 ಹೇಳಿಕೆ ಪ್ರಕಾರ ಸಾಕ್ಷ್ಯವನ್ನು ನುಡಿಯದೇ ಇದ್ದ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಅಭಿಯೋಜನೆಯು ಸದರಿ ಸಾಕ್ಷಿದಾರರು ಆರೋಪಿತರಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಎಂಬ ಸೂಚನೆಗೆ ಸದರಿ ಸಾಕ್ಷಿದಾರರು ನಿರಾಕರಿಸಿದ್ದಾರೆ.

**14.** ಪ್ರಾಸಾ-6 ರವಿ ರಂಗಪ್ಪ ನಾಯಕ ಇವರು ಸಹ ಪ್ರತ್ಯಕ್ಷ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಸುಮಾರು 4 ವರ್ಷದ ಹಿಂದೆ ಮುಂಜಾನೆ 8.00 ಗಂಟೆಯ ಸುಮಾರಿಗೆ ಕಾಡರಕೊಪ್ಪ ಗ್ರಾಮದ ಮಠದ ಹತ್ತಿರ ಫಿರ್ಯಾದಿದಾರರು ಮತ್ತು ಆರೋಪಿತರು ಜಗಳವಾಡುತ್ತಿದ್ದರು, ತಾನು ಹೋಗಿ ಬಿಡಿಸಿರುತ್ತೇನೆ, ಚಾಸಾ-1 ಮತ್ತು

ಆರೋಪಿತರನ್ನು ಮಾತ್ರ ನೋಡಿರುತ್ತೇನೆ, ಬೇರೆ ಜನ ಬಹಳ ಇದ್ದ ಕಾರಣ ಬೇರೆಯವರನ್ನು ನೋಡಿರುವುದಿಲ್ಲ, ಜಗಳದಲ್ಲಿ ಚಾಸಾ-1 ರವರ ತಲೆಗೆ ಹೊಡೆದಿದ್ದನ್ನು ಯಾರು ಹೊಡೆದರು ಎಂದು ತಾನು ನೋಡಿರುವುದಲ್ಲ, ಜಗಳ ಬಿಡಿಸುವ ಕಾಲಕ್ಕೆ ತಾನೊಬ್ಬನೇ ಇದ್ದೆ, ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರಿಗೆ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಅವರು ತಮ್ಮ ಪಾಟೀ ಸವಾಲಿನಲ್ಲಿ ಫಿರ್ಯಾದಿದಾರರು ಮತ್ತು ಆರೋಪಿತರು ಯಾವ ವಿಷಯದ ನಡುವೆ ಭಿನ್ನಾಭಿಪ್ರಾಯ ಇತ್ತು ಎಂದು ಹೇಳಲು ಬರುವುದಿಲ್ಲ, ದಿ:10-07-2008 ರಂದು ಆದ ಘಟನೆಯನ್ನು ತಾನು ಕಣ್ಣಾರೆ ನೋಡಿಲ್ಲ, ಘಟನೆಯಲ್ಲಿ ಯಾರು ಯಾವ ಆಯುಧಗಳಿಂದ ಯಾರಿಗೆ ಹೊಡೆದರು ಎಂದು ತನಗೆ ಗೊತ್ತಿಲ್ಲ, ಅದೇ ರೀತಿ ಘಟನೆ ಬಗ್ಗೆ ತನ್ನ ಸ್ವಂತಕ್ಕೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

**15.** ಪ್ರಾಸಾ-7 ರಂನಗೌಡ ವಸಂತಗೌಡ ನಾಯಕ ಇವರು ನಿಪಿ-1 ಫಿರ್ಯಾದಿಯನ್ನು ಬರೆದ ದಸ್ತೂರ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಸುಮಾರು 3-4 ವರ್ಷಗಳ ಹಿಂದೆ ಕಾಡರಕೊಪ್ಪ ಗ್ರಾಮದಲ್ಲಿರುವಾಗ ಬೆಳಿಗ್ಗೆ 10.00 ರಿಂದ 10.30 ಗಂಟೆಯವರೆಗೆ ತನ್ನನ್ನು ಲೋಕಾಪೂರ ಪೋಲಿಸರು ಠಾಣೆಗೆ ಕರೆದುಕೊಂಡು ಹೋದರು, ಫಿರ್ಯಾದಿದಾರರ ತರ್ಫೆ ಕರೆದುಕೊಂಡು ಹೋದರು, ಚಾಸಾ-1 ರವರು ಆರೋಪಿತರ ನಡುವೆ ಜಗಳವಾಗಿರುತ್ತದೆ, ಅವರು ಹೇಳಿದಂತೆ ತಾನು ಫಿರ್ಯಾದಿಯನ್ನು ಬರೆದಿರುತ್ತೇನೆ, ಜಗಳ ಯಾರ ನಡುವೆ ನಡೆಯಿತು ಎಂದು ತನಗೆ ಗೊತ್ತಿಲ್ಲ, ಆದರೆ ಜಗಳದ ಬಗ್ಗೆ ಬರೆದಿರುತ್ತೇನೆ, ಚಾಸಾ-1 ರವರು ಹೇಳಿದಂತೆ ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರಿಗೆ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಅವರು ತಮ್ಮ ಪಾಟೀ ಸವಾಲಿನಲ್ಲಿ ನಿಪಿ-1 ರಲ್ಲಿ ಬರೆದ ವಿಚಾರಗಳು ತನಗೆ ಗೊತ್ತಿಲ್ಲ, ನಿಪಿ-1 ರ ಪ್ರಕಾರ ಊರಿನಲ್ಲಿ ಯಾವುದೇ ಘಟನೆ ಆಗಿಲ್ಲ, ತನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**16.** ಪ್ರಾಸಾ-10 ರಮೇಶ ವೆಂಕನಗೌಡ ಪಾಟೀಲ ಇವರು ವೈದ್ಯಾಧಿಕಾರಿಗಳಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತಾನು ಕಳೆದ 10 ವರ್ಷಗಳಿಂದ ಎಲುಬು ಕೀಲು ತಜ್ಞರಾಗಿ ಖಾಸಗಿ ಆಸ್ಪತ್ರೆಯನ್ನು ಮುಧೋಳದಲ್ಲಿ ನಡೆಸುತ್ತಾ ಇರುತ್ತೇನೆ, ದಿ:10-07-2008 ರಂದು ಬೆಳಿಗ್ಗೆ 11.00 ಗಂಟೆಗೆ ಸುರೇಶ ರಂಗಪ್ಪ ನಾಯಕ, ರಾಮಪ್ಪ ಬದನೂರ ಎಂಬುವರು ಇಬ್ಬರು ಹಲ್ಲೆಗೊಳಗಾಗಿ ಚಿಕಿತ್ಸೆಗೆ ಬಂದಿರುತ್ತಾರೆ, ತಾನು ಅವರನ್ನು ಪರೀಕ್ಷೆ ಮಾಡಿರುತ್ತೇನೆ ಮತ್ತು ಅವರಲ್ಲಿ ಮೊದಲನೇಯದಾಗಿ ಸುರೇಶ ನಾಯಕರವರನ್ನು ಪರೀಕ್ಷಿಸಿದಾಗ 1) ಎದೆಗೆ ಒಳಪೆಟ್ಟು, ಒಳನೋವು ಕಂಡುಬರುತ್ತದೆ, 2) ಬೆನ್ನಿಗೆ ಒಳಪೆಟ್ಟು, ಒಳನೋವು ಕಂಡುಬರುತ್ತದೆ, ಸದರಿ ಎರಡು ಗಾಯಗಳು ಸಾಧಾ ಸ್ವರೂಪದ ಗಾಯಗಳಾಗಿರುತ್ತವೆ, ತಾನು ಈ ಕುರಿತು ನಿಪಿ-9 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ನಂತರ ರಾಮಪ್ಪ ಶಂಕ್ರಪ್ಪ ಬದನೂರರವರನ್ನು ಪರೀಕ್ಷಿಸಿದಾಗ 1) ಬಲಕಿವಿಯ ಪರದೆ ಹರಿದಿತ್ತು, 2) ತಲೆಯ ಹಿಂದಿನ ಭಾಗದಲ್ಲಿ ಹರಿತವಾದ ಗಾಯ ಕಂಡುಬಂದಿರುತ್ತದೆ, 3) ಬೆನ್ನಿನ ಹಿಂಭಾಗಕ್ಕೆ ಒಳಪೆಟ್ಟು ಗಾಯವಾಗಿತ್ತು, 4) ಅವರ ಎಡತೊಡೆಗೆ ಒಳಪೆಟ್ಟಾಗಿತ್ತು, ಸದರಿ ಮೇಲಿನ ಗಾಯಗಳು ಸಾಧಾ ಸ್ವರೂಪದ ಗಾಯಗಳಾಗಿದ್ದು ಮತ್ತು ಬಿರುಸಾದ ಹಾಗೂ ಮೊಂಡವಾದ ವಸ್ತುವಿನಿಂದ ಹೊಡೆದರೆ ಸದರಿ ಗಾಯಗಳು ಆಗುವ ಸಂಭವವಿರುತ್ತದೆ, ಸದರಿ ಮೇಲೆ ಹೇಳಿದ ಗಾಯಗಳಲ್ಲಿ 1 ನೇ

ಗಾಯ ತೀವ್ರ ಸ್ವರೂಪದ ಗಾಯವಾಗಿದ್ದು, ಉಳಿದವು ಸಾಧಾ ಸ್ವರೂಪದ್ದಾಗಿರುತ್ತವೆ, ಅದೇ ರೀತಿ 1 ನೇ ಗಾಯ ತಾನು ಕಿವಿ ಮೂಗು ಗಂಟಲ ತಜ್ಞರಿಂದ ವರದಿ ಆಧಾರದ ಮೇಲೆ ತೀವ್ರ ಸ್ವರೂಪದ ಗಾಯವೆಂದು ತನಗೆ ಕಂಡುಬಂದಿರುತ್ತದೆ ಮತ್ತು ನಮೂದಿಸಿರುತ್ತೇನೆ, ಈ ಕುರಿತು ತಾನು ನಿಪಿ-10 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ನ್ಯಾಯಾಲಯದ ಮುಂದಿರುವ ಕಲ್ಲು ಹಾಗೂ ಬಡಿಗೆಗಳಿಂದ ಹಲ್ಲೆ ಮಾಡಿದರೆ ಮೇಲೆ ಹೇಳಿದ ಗಾಯಗಳು ಆಗುವ ಸಂಭವವಿರುತ್ತದೆ ಎಂದು ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರಿಗೆ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಅವರು ತಮ್ಮ ಪಾಟೀ ಸವಾಲಿನಲ್ಲಿ ಸದರಿ ಇಬ್ಬರು ಗಾಯಾಳುಗಳನ್ನು ಬೆಳಿಗ್ಗೆ 11.00 ಗಂಟೆಗೆ ಚಿಕಿತ್ಸೆಯನ್ನು ಕೊಟ್ಟಿರುತ್ತೇನೆ, ಒಮ್ಮೆಗೆ ಪರೀಕ್ಷಿಸಿರುತ್ತೇನೆ, ತನ್ನ ಗಾಯದ ಪ್ರಮಾಣ ಪತ್ರದಲ್ಲಿ ತಾಜಾ ಗಾಯಗಳೆಂದು ನಮೂದು ಮಾಡಿರುತ್ತೇನೆ, ಆದರೆ ಸಮಯ ನಮೂದು ಮಾಡಿಲ್ಲ, ಸದರಿ ಗಾಯದ ಪ್ರಮಾಣ ಪತ್ರದಲ್ಲಿ ತಾಜಾ ಸ್ವರೂಪದ ಗಾಯಗಳೆಂದರೆ ಸುಮಾರು 6 ರಿಂದ 12 ಗಂಟೆಯ ಒಳಗಿನ ಗಾಯಗಳು ಎಂದು ಹೇಳಬಲ್ಲೆ, ಇಬ್ಬರೂ ಗಾಯಾಳುಗಳು ನೇರವಾಗಿ ಬೇರೆ ಎಲ್ಲೂ ಚಿಕಿತ್ಸೆ ಪಡೆಯದೇ ತಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿರುತ್ತಾರೆ, ಸದರಿ ಚಿಕಿತ್ಸೆ ಕೊಟ್ಟ ಬಗ್ಗೆ ತಾನು ಮುಧೋಳ ಪೋಲಿಸ ಠಾಣೆಗೆ ತಿಳಿಸಿರುತ್ತೇನೆ, ಸದರಿ ಗಾಯಾಳುಗಳು ಪೋಲಿಸ ಪೇದೆಯೊಂದಿಗೆ ಬಂದಿರುವುದಿಲ್ಲ, ಖುದ್ದಾಗಿ ಬಂದಿರುತ್ತಾರೆ, ಶ್ರೀ ರಾಮಪ್ಪ ಬದನೂರ ಎಂಬುವವರ ಕಿವಿ ಪರದೆ ಹರಿದ ಬಗ್ಗೆ ವೈದ್ಯರಾದ ಕಂಕರೆಡ್ಡಿ ಎಂಬುವರು ಪರೀಕ್ಷೆ ಮಾಡಿರುತ್ತಾರೆ, ಸದರಿ ಗಾಯದ ಪ್ರಮಾಣ ಪತ್ರವನ್ನು ಕೊಡುವ ಮುಂಚೆ ತಾನು ವೈದ್ಯರಾದ ಕಂಕರೆಡ್ಡಿಯವರಿಂದ ವರದಿ ಪಡೆದುಕೊಂಡಿರುತ್ತೇನೆ, ಆ ವರದಿಯನ್ನು ತಾನು ಪೋಲಿಸರಿಗೆ ಒಪ್ಪಿಸಿರುತ್ತೇನೆ, ಸದರಿ

ನಿಪಿ-10 ಮತ್ತು 11 ರಲ್ಲಿ ನಮೂದಿಸಿದ ಗಾಯಗಳು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮೋಟರ ಸೈಕಲ ಮೇಲಿಂದ ಗಟ್ಟಿಯಾದ ಸ್ಥಳದಲ್ಲಿ ಬಿದ್ದಾಗ ಅಗುವ ಸಾಧ್ಯತೆ ಇರುತ್ತದೆಂದು ನುಡಿದಿರುತ್ತಾರೆ.

**17.** ಪ್ರಾಸಾ-8 ಚಂದ್ರಶೇಖರ ಈರಯ್ಯಾ ಹಿರೇಮಠ ಇವರು ಸಹ ವೈದ್ಯಾಧಿಕಾರಿಗಳಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿ:10-07-2008 ರಂದು ತಾನು ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಬೆಳಿಗ್ಗೆ 9-50 ಗಂಟೆಗೆ ಸುರೇಶ ರಂಗಪ್ಪ ನಾಯಕ ಇವನು ಪೋಲಿಸರ ಜೊತೆ ಹೊಡೆದಾಟದಲ್ಲಿ ಗಾಯವಾದ ಕಾರಣ ಚಿಕಿತ್ಸೆಗೆ ತನ್ನ ಹತ್ತಿರ ಬಂದಿರುತ್ತಾರೆ, ತಾನು ಅವರನ್ನು ಪರೀಕ್ಷೆ ಮಾಡಿದಾಗ 1) ಅವರ ಎದೆಯ ಮೇಲೆ ಊತದ ಗಾಯ, 2) ಬೆನ್ನಿನ ಮೇಲೆ ಊತದ ಗಾಯ, ಅದಲ್ಲದೇ ಸದರಿ ವ್ಯಕ್ತಿಗೆ ತೀವ್ರತರವಾದ ನೋವು ಕೂಡ ಇತ್ತು, ಸದರಿ ಗಾಯಗಳು 2 ತಾಸುಗಳ ಒಳಗಿನ ಗಾಯಗಳು ಇರುತ್ತವೆ ಮತ್ತು ಅವು ಸಾಧಾ ಸ್ವರೂಪದ ಗಾಯಗಳು ಇರುತ್ತವೆ, ಈ ಕುರಿತು ತಾನು ನಿಪಿ-4 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ನಿಪಿ-4 ರಲ್ಲಿ ಹೇಳಿದ ಗಾಯಗಳು ಕಟ್ಟಿಗೆ ಮತ್ತು ಕಲ್ಲಿನಿಂದ ಹೊಡೆದರೆ ಆಗುವ ಸಾಧ್ಯತೆ ಇದೆ, ನಂತರ ರಾಮಪ್ಪ ಶಂಕ್ರಪ್ಪ ಮುದನ್ನೂರ ಅವರು ಬೆಳಿಗ್ಗೆ 9-50 ಕ್ಕೆ ಹೊಡೆದಾಟದಲ್ಲಿ ಗಾಯವಾದ ಹಿನ್ನಲೆಯೊಂದಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿರುತ್ತಾರೆ, ತಾನು ಅವರನ್ನು ಪರೀಕ್ಷೆ ಮಾಡಿದಾಗ 1) ಅವರ ತಲೆ ಹಿಂಭಾಗದಲ್ಲಿ ಹರಿದ ಗಾಯ, 2) ಭುಜದ ಹಿಂಭಾಗದಲ್ಲಿ ಊತದ ಗಾಯ, 3) ಎಡ ತೊಡೆಯ ಮೇಲೆ ಊತದ ಗಾಯ, 4) ಬಲ ಕಿವಿಯ ಒಳಗಿನ ಪರದೆ ಹರಿದಿತ್ತು, ಸದರಿ ಗಾಯಗಳು 2 ತಾಸುಗಳ ಒಳಗಿನ ಗಾಯಗಳು ಇರುತ್ತವೆ, ಈ ಕುರಿತು ತಾನು ನಿಪಿ-5 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ಸದರಿ ಮೇಲೆ

ಹೇಳಿದ 4 ನೇ ಗಾಯ ತೀವ್ರ ಸ್ವರೂಪದ ಗಾಯವಾಗಿದ್ದು ಮತ್ತು 1 ರಿಂದ 3 ನೇ ಗಾಯಗಳು ಸಾಧಾ ಸ್ವರೂಪದ ಗಾಯಗಳಾಗಿರುತ್ತವೆ, ಸದರಿ ಗಾಯಗಳು ಕಟ್ಟಿಗೆ, ಕಲ್ಲಿನಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ, ಅದಲ್ಲದೇ ಸದರಿ ಗಾಯ ನಂ.4 ಕಿವಿಗೆ ಆದ ಗಾಯವು ಹೆಚ್ಚಿನ ಚಿಕಿತ್ಸೆಗಾಗಿ ಕಿವಿ ತಜ್ಞರ ಬಳಿ ಕಳಿಸಿದ್ದು, ಅವರ ಅಭಿಪ್ರಾಯದ ಮೇರೆಗೆ ನಿಪಿ-5 ನ್ನು ಕೊಟ್ಟಿರುತ್ತೇನೆ, ನಂತರ ಅದೇ ದಿನ 10.00 ಗಂಟೆಗೆ ಮೇಲೆ ಹೇಳಿದ ವ್ಯಕ್ತಿಗಳಲ್ಲದೇ ತಾನು ರಾಮಪ್ಪ ರಂಗಪ್ಪ ನಾಯಕ ಪೋಲಿಸರು ಕರೆದುಕೊಂಡು ಬಂದ ವ್ಯಕ್ತಿಯನ್ನು ಹಲ್ಲೆಗೆ ಒಳಗಾದ ವ್ಯಕ್ತಿಯನ್ನು ತಾನು ಪರೀಕ್ಷೆ ಮಾಡಿದಾಗ 1) ತಲೆಯ ಹಿಂಭಾಗದಲ್ಲಿ ನೋವಿನಿಂದ ಕೂಡಿದ ಬಾವು ಆಗಿತ್ತು, 2) ಎದೆಯ ಭಾಗದಲ್ಲಿ ನೋವು ಇತ್ತು, ಸದರಿ ಗಾಯಗಳು 2 ತಾಸು ಒಳಗಿನ ಗಾಯಗಳಾಗಿರುತ್ತವೆ ಮತ್ತು ಅವು ಸಾಧಾ ಸ್ವರೂಪದ ಗಾಯಗಳಾಗಿರುತ್ತವೆ, ಈ ಕುರಿತು ತಾನು ನಿಪಿ-6 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ನಿಪಿ-6 ರಲ್ಲಿ ಆದ ಗಾಯಗಳು ಬಡಿಗೆ ಮತ್ತು ಕಲ್ಲಿನಿಂದ ಹೊಡೆದರೆ ಗಾಯಗಳು ಆಗುವ ಸಾಧ್ಯತೆ ಇರುತ್ತದೆ, ನಂತರ ರುಕ್ಮವ್ವ ರಂಗಪ್ಪ ನಾಯಕ ಇವರನ್ನು ಬೆಳಿಗ್ಗೆ 10.00 ಗಂಟೆಗೆ ಮೇಲೆ ಹೇಳಿದ ವ್ಯಕ್ತಿಗಳ ಜೊತೆ ಹಲ್ಲೆಗೆ ಒಳಗಾದ ಬಗ್ಗೆ ಪೋಲಿಸರ ಜೊತೆಗೆ ಬಂದಾಗ ತಾನು ಅವರನ್ನು ಪರೀಕ್ಷೆ ಮಾಡಿದಾಗ 1) ಹಣೆ ಬಲಭಾಗದಲ್ಲಿ ನೋವು ಕಂಡು ಬಂದಿರುತ್ತದೆ, 2) ತಲೆ ಬುರುಡೆಗೆ ತೀವ್ರತರವಾದ ನೋವು ಕಂಡುಬಂದಿರುತ್ತದೆ, ಸದರಿ ಗಾಯಗಳು 2 ತಾಸುಗಳ ಒಳಗಿನ ಗಾಯಗಳು ಇರುತ್ತವೆ, ಈ ಕುರಿತು ತಾನು ನಿಪಿ-7 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ನಿಪಿ-7 ರಲ್ಲಿ ನಮೂದಿಸಿರುವ ಕಟ್ಟಿಗೆ ಮತ್ತು ಕಲ್ಲಿನಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರಿಗೆ ಈ ನ್ಯಾಯಾಲಯವು ಹಲವಾರು ಬಾರಿ ಸಮನ್ಸ ಮತ್ತು ವಾರಂಟ ಹೊರಡಿಸಿದರೂ ಸಹ ಸದರಿ ಸಾಕ್ಷಿದಾರರು ಆರೋಪಿತರ ಪರ ವಕೀಲರು ಮಾಡುವ ಪಾಟೀ ಸವಾಲಿಗೆ ಹಾಜರಾಗಿರುವುದಿಲ್ಲ.

**18.** ಪ್ರಾಸಾ-12 ಧನಸಿಂಗ ಸಕ್ಕು ನಾಯಕ ಇವರು ತನಿಖಾಧಿಕಾರಿಗಳಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿ:10-07-2008 ರಂದು ಚಾಸಾ-1 ರವರು ನೀಡಿದ ಫಿರ್ಯಾದಿಯನ್ನು ಸ್ವೀಕರಿಸಿಕೊಂಡು ಲೋಕಾಪೂರ ಪೋಲಿಸ ಠಾಣೆ ಗುನ್ನೆ ನಂ.101/2008 ರಂತೆ ನಿಪಿ-12 ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ, ನಂತರ ಮುಂದಿನ ತನಿಖೆಗಾಗಿ ಚಾಸಾ-14 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರಿಗೆ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು ಆದರೆ ಸದರಿ ಸಾಕ್ಷಿದಾರರು ಆರೋಪಿತರ ಪರ ವಕೀಲರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗೆಳೆದಿರುತ್ತಾರೆ.

**19.** ಸದರಿ ಪ್ರಕರಣದಲ್ಲಿ ಅಭಿಯೋಜನೆಯು ವಿಚಾರಣೆ ಮಾಡಿದಂತಹ ಪ್ರಾಸಾ-1 ಇವರು ಪಿರ್ಯಾದಿದಾರರಿದ್ದು, ಪ್ರಾಸಾ-2 ಮತ್ತು 5 ಇವರು ಗುನ್ನೆ ಸ್ಥಳ ಪಂಚನಾಮೆಯ ಪಂಚರಿದ್ದು, ಪ್ರಾಸಾ-3 ಮತ್ತು 4 ಇವರು ಗಾಯಾಳು ಸಾಕ್ಷಿದಾರರಿದ್ದು, ಪ್ರಾಸಾ-6, 7, 9 ಮತ್ತು 12 ಇವರು ಪ್ರತ್ಯಕ್ಷ ಸಾಕ್ಷಿದಾರರಿದ್ದು, ಪ್ರಾಸಾ-8 ಮತ್ತು 10 ರವರು ವೈದ್ಯಾಧೀಕಾರಿಗಳಿದ್ದು ಮತ್ತು ಪ್ರಾಸಾ-13 ರವರು ತನಿಖಾಧಿಕಾರಿಗಳು ಇರುತ್ತಾರೆ.

**20.** ನಿಪಿ-1 ಫಿರ್ಯಾದಿಯಲ್ಲಿ ದಿ:10-07-2008 ರಂದು ಮುಂಜಾನೆ 7.30 ಗಂಟೆಯ ಸುಮಾರಿಗೆ ಪ್ರಾಸಾ-1 ಫಿರ್ಯಾದಿದಾರರು ತಮ್ಮ ಮನೆಯಲ್ಲಿದ್ದಾಗ ಆರೋಪಿತರು ಅಲ್ಲಿಗೆ ಅಕ್ರಮಕೂಟ ಕಟ್ಟಿಕೊಂಡು ಬಂದು ಪ್ರಾಸಾ-1 ಫಿರ್ಯಾದಿದಾರರಿಗೆ ಲೇ ರಾಮ್ಯಾ ಬೋಸಡಿ ಮಗನ, ನಮ್ಮ ಜಾಗಾದಾಗ ಸ್ಟೇ ತಂದ ಬಂದ ಇಡಸಿ ಮಗನ, ನಿನ್ನ ಬಿಡುವುದಿಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಆರೋಪಿ ನಂ.1, 7, 9, 10, 11 ಇವರು ಬಡಿಗೆಳಿಂದ ಪ್ರಾಸಾ-1 ರವರ ತಲೆಯ ಮೇಲೆ, ಎದೆಯ ಮೇಲೆ, ಡುಬ್ಬಕ್ಕೆ ಮತ್ತು ಬಲಗಡೆ ಪಾದಕ್ಕೆ ಮತ್ತು ಮೂಗಿಗೆ ಹೊಡೆದರು ಹಾಗೂ ಆರೋಪಿ ನಂ.8 ಮತ್ತು 15 ರವರು ಕಲ್ಲುಗಳಿಂದ ಹೆಡಕಿಗೆ ಮತ್ತು ಬಲಗಡೆ ಕಣ್ಣಿನ ಹುಬ್ಬಿನ ಹತ್ತಿರ ಹೊಡೆದರು ಮತ್ತು ಆರೋಪಿ ನಂ.13 ಮತ್ತು 14 ರವರು ಬಲಗಡೆ ಕಪಾಳಿಗೆ ಹೊಡೆದು ಗಾಯ ಪಡಿಸಿದರು, ಆಗ ಸದರಿ ಜಗಳವನ್ನು ಚಾಸಾ-4 ರಿಂದ 7, 9 ಮತ್ತು 10 ರವರು ಬಿಡಿಸಿಕೊಂಡಾಗ ಆರೋಪಿ ನಂ.10 ಮತ್ತು 13 ರವರು ಕಲ್ಲುಗಳಿಂದ ಚಾಸಾ-5 ರವರ ಎದೆಗೆ, ತಲೆಗೆ, ಹೊಟ್ಟೆಗೆ ಮತ್ತು ಬೆನ್ನಿನ ಮೇಲೆ ಹೊಡೆದು ಗಾಯ ಪಡಿಸಿದರು ಹಾಗೂ ಆರೋಪಿ ನಂ.7 ಇವರು ಕೈಯಿಂದ ಚಾಸಾ-5 ರವರ ಕಪಾಳ ಮೇಲೆ ಹೊಡೆದರು ಮತ್ತು ಆರೋಪಿ ನಂ.1 ಇವನು ಪ್ರಾಸಾ-3 ರವರ ಬೆನ್ನಿಗೆ, ನಡಕ್ಕೆ ಹಾಗೂ ಎದೆಗೆ ಕೈಯಿಂದ ಹೊಡೆದನು ಮತ್ತು ಆರೋಪಿ ನಂ.8 ಇವನು ಕಲ್ಲಿನಿಂದ ಪ್ರಾಸಾ-4 ರವರ ತಲೆಗೆ ಹಾಗೂ ಆರೋಪಿ ನಂ.5 ಇವನು ಕೈಯಿಂದ ಪ್ರಾಸಾ-4 ರವರಿಗೆ ಹೊಡೆದು ಗಾಯ ಮಾಡಿದನು ಹಾಗೂ ಆರೋಪಿತರೆಲ್ಲರೂ ಹೋಗುವಾಗ ನಿಮಗೆ ಬಿಡುವುದಿಲ್ಲ ಖಲಾಸ ಮಾಡುತ್ತೇವೆ ಅಂತಾ ಜೀವದ ಭಯ ಹಾಕುತ್ತಾ ಹೋದರು ಎಂದು ನಮೂದು ಇರುತ್ತದೆ.

**21.** ಪ್ರಾಸಾ-1 ಫಿರ್ಯಾದಿದಾರರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಆರೋಪಿತರೆಲ್ಲರೂ ಈಗ ಸುಮಾರು 5-6 ತಿಂಗಳ ಹಿಂದೆ ಮುಂಜಾನೆ 7.30 ಗಂಟೆಗೆ ತಾನು ತಮ್ಮ ಮನೆಯಲ್ಲಿದ್ದಾಗ ಬಂದು ತನ್ನ ಜೊತೆ ಜಗಳ ತೆಗೆದು, ತನಗೆ ಅವಾಚ್ಯ ಶಬ್ದಗಳಿಂದ ಬೈದು, ಆರೋಪಿತರ ಪೈಕಿ ಆರೋಪಿ ನಂ.1, 7 ಮತ್ತು 13 ರವರು ದೊಣ್ಣೆಗಳಿಂದ ತನ್ನ ಎದೆಗೆ, ಬೆನ್ನಿಗೆ ಹೊಡೆದು ಗಾಯ ಪಡಿಸಿದರು ಹಾಗೂ ಆರೋಪಿ ನಂ.15 ಇವನು ಕಲ್ಲಿನಿಂದ ತಲೆಗೆ ಹೊಡೆದನು, ಜಗಳವನ್ನು ಬಿಡಿಸಲು ಬಂದ ಚಾಸಾ-5 ಸುರೇಶನಿಗೆ ಆರೋಪಿ ನಂ.13 ದೊಣ್ಣೆಯಿಂದ ಅವನ ಎದೆಗೆ ಮತ್ತು ಹೊಟ್ಟೆಗೆ ಹೊಡೆದನು ಹಾಗೂ ಆರೋಪಿ ನಂ.13 ಇವನು ದೊಣ್ಣೆಯಿಂದ ಪ್ರಾಸಾ-4 ರವರ ಬೆನ್ನಿಗೆ, ತಲೆಗೆ ಹೊಡೆದನು ಹಾಗೂ ಆರೋಪಿ ನಂ.6 ಇವನು ಕಲ್ಲಿನಿಂದ ಪ್ರಾಸಾ-3 ರವರ ಹೊಟ್ಟೆಗೆ ಹೊಡೆದಾಗ ಆರೋಪಿ ನಂ.1 ರಿಂದ 3 ರವರು ಸಹ ಅವರಿಗೆ ಹೊಡೆದರು ಮತ್ತು ಆರೋಪಿತರು ಅವರಿಗೆ ಜೀವ ಬೆದರಿಕೆ ಹಾಕಿದರು ಎಂದು ನುಡಿದಿರುತ್ತಾರೆ.

**22.** ಅದೇ ರೀತಿ ಗಾಯಾಳು ಸಾಕ್ಷಿದಾರರಾದ ಪ್ರಾಸಾ-3 ರುಕ್ಮವ್ವ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಈಗ ಸುಮಾರು 2 ವರ್ಷಗಳ ಹಿಂದೆ ಮದ್ಯಾಹ್ನ 12.30 ಗಂಟೆಯ ಸುಮಾರಿಗೆ ಪ್ರಾಸಾ-1 ರವರ ಮನೆಯ ಮುಂದೆ ಆಸ್ತಿ ಸಂಬಂಧ ಜಗಳವಾಯಿತು, ಆಗ ಪ್ರಾಸಾ-1 ರವರಿಗೆ ಆರೋಪಿ ನಂ.2 ರಿಂದ 4 ಮತ್ತು 7 ರವರು ಹೊಡೆದರು ಹಾಗೂ ಆ ಸಮಯದಲ್ಲಿ ತಾನು ಮನೆಯಲ್ಲಿದ್ದೆ, ಉಳಿದ ಆರೋಪಿತರು ಸಹ ಪ್ರಾಸಾ-1 ರವರ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಕೇಳಿದ್ದೇನೆ, ತಾನು ತಮ್ಮೂರಿನ ವಿಠ್ಠಲ ದೇವರ ಗುಡಿಯ ಹತ್ತಿರ ಬಂದು ಪ್ರಾಸಾ-1 ರವರಿಗೆ ಹಾಗೂ ತನ್ನ ಮಕ್ಕಳಾದ ಚಾಸಾ-5 ಮತ್ತು ಪ್ರಾಸಾ-4 ರವರಿಗೆ ಬಿಡಿಸಿಕೊಂಡೆ, ಆರೋಪಿತರ ಪೈಕಿ ಕೆಲವೊಬ್ಬರು ಕೈಯಿಂದ, ಕಟ್ಟಿಗೆಯಿಂದ

ಮತ್ತು ಚಪ್ಪಲಿಯಿಂದ ಹೊಡೆದಿದ್ದರು, ಗದ್ದಲದಲ್ಲಿ ಯಾರು ಯಾರಿಗೆ ಹೊಡೆದಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆಂದು ನುಡಿದಿರುತ್ತಾರೆ. ಅದೇ ರೀತಿ ಪ್ರಾಸಾ-4 ಗಾಯಾಳು ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಆರೋಪಿತರು ಪ್ರಾಸಾ-1 ರವರಿಗೆ ನೀನೆ ಅವರಿಗೆ ಕಲಿಸಿದ್ದೀಯಾ ಅಂತಾ ಅವರ ಮನೆಯ ಮುಂದೆ ಮತ್ತು ಸದಾಶಿವ ಮಠದ ಹತ್ತಿರ ಬಡಿದಿದ್ದಾರೆ, ಆಗ ಆರೋಪಿ ನಂ.7 ಇವನು ತನಗೆ ಬಡಿಗೆಯಿಂದ ತಲೆಗೆ ಹೊಡೆದನು, ಪ್ರಾಸಾ-1, 3 ಹಾಗೂ ಕಾಶೀಬಾಯಿ ಇವರಿಗೆ ಆರೋಪಿತರು ಹೊಡೆದಿದ್ದಾರೆ, ಆರೋಪಿ ನಂ.3 ಇವನು ಪ್ರಾಸಾ-1 ರವರ ಕಿವಿಗೆ ಬಡಿದಿದ್ದಾನೆ ಹಾಗೂ ಆರೋಪಿ ನಂ.1 ಇವನು ಪ್ರಾಸಾ-1 ರವರ ಎಡಭುಜಕ್ಕೆ ಬಡಿದಿದ್ದಾನೆ ಹಾಗೂ ಕಾಶೀಬಾಯಿಗೆ ಆರೋಪಿ ನಂ.1 ಇವನು ಬಡಿಗೆಯಿಂದ ಬೆನ್ನಿಗೆ ಬಡಿದಿದ್ದಾನೆ ಎಂದು ನುಡಿದಿರುತ್ತಾರೆ.

**23.** ಈ ಮೇಲೆ ಹೇಳಿದ ಗಾಯಾಳು ಸಾಕ್ಷಿದಾರರಾದ ಪ್ರಾಸಾ-1, 3 ಮತ್ತು 4 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅವರು ನಿಖರವಾಗಿ ಯಾವ ಯಾವ ಆರೋಪಿತರು ಯಾರ ಯಾರ ಮೇಲೆ ಮತ್ತು ಯಾವ ಯಾವ ವಸ್ತುಗಳಿಂದ ಹಲ್ಲೆ ಮಾಡಿ ಗಾಯಾಪಡಿಸಿದರು ಎಂದು ನುಡಿದಿರುವುದಿಲ್ಲ. ಮುಂದುವರೆದು ನಿಪಿ-1 ಫಿರ್ಯಾದಿ ಪ್ರಕಾರ ಹಾಗೂ ಪ್ರಾಸಾ-1 ರವರ ಸಾಕ್ಷ್ಯದ ಪ್ರಕಾರ ಸದರಿ ಘಟನೆ ಪ್ರಾಸಾ-1 ರವರ ಮನೆಯ ಮುಂದೆ ಆಗಿರುತ್ತದೆ. ಆದರೆ ಗಾಯಾಳು ಸಾಕ್ಷಿದಾರರಾದ ಪ್ರಾಸಾ-4 ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಪ್ರಾಸಾ-1 ರವರ ಮೇಲೆ ಅವರ ಮನೆಯ ಮುಂದೆ ಹಾಗೂ ಸದಾಶಿವ ಮಠದ ಹತ್ತಿರ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಅದೇ ರೀತಿ ಇನ್ನೊಬ್ಬ ಗಾಯಾಳು ಸಾಕ್ಷಿದಾರರಾದ ಪ್ರಾಸಾ-3 ಇವರು ಆರೋಪಿತರು ಪ್ರಾಸಾ-1, 4

ಮತ್ತು 5 ರವರ ಮೇಲೆ ಪ್ರಾಸಾ-1 ರವರ ಮನೆಯ ಮುಂದೆ ಹಲ್ಲೆ ಮಾಡಿದಾಗ ತಾನು ಮನೆಯಲ್ಲಿದ್ದೆ, ತದನಂತರ ತಾನು ವಿಠ್ಠಲ ದೇವರ ಗುಡಿಯ ಹತ್ತಿರ ಬಂದು ಪ್ರಾಸಾ-1 ಹಾಗೂ ತನ್ನ ಮಕ್ಕಳಾದ ಚಾಸಾ-5 ಮತ್ತು ಪ್ರಾಸಾ-4 ರವರನ್ನು ಬಿಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಆದ್ದರಿಂದ ಪ್ರಾಸಾ-1 ರವರ ಸಾಕ್ಷ್ಯದ ಪ್ರಕಾರ ಅಭಿಯೋಜನೆಯು ಹೇಳಿದಂತಹ ಘಟನೆ ಪ್ರಾಸಾ-1 ರವರ ಮನೆಯ ಮುಂದೆ ನಡೆದಾಗ ಪ್ರಾಸಾ-3 ಗಾಯಾಳು ಸಾಕ್ಷಿದಾರರು ಸದರಿ ಸ್ಥಳದಲ್ಲಿ ಗೈರು ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮುಂದುವರೆದು ಅಭಿಯೋಜನೆಯ ಪ್ರಕರಣದ ಪ್ರಕಾದ ಸದರಿ ಘಟನೆ ಪ್ರಾಸಾ-1 ರವರ ಮನೆಯ ಮುಂದೆ ಆಗಿರುತ್ತದೆ. ಆದರೆ ಗಾಯಾಳು ಸಾಕ್ಷಿದಾರರಾದ ಪ್ರಾಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ತಾನು ವಿಠ್ಠಲ ದೇವರ ಗುಡಿಯ ಹತ್ತಿರ ಬಂದಾಗ ಆರೋಪಿತರು ಪ್ರಾಸಾ-1, 4 ಮತ್ತು ಚಾಸಾ-5 ರವರ ಮೇಲೆ ಹಲ್ಲೆ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಅದೇ ರೀತಿ ಮತ್ತೊಬ್ಬ ಗಾಯಾಳು ಸಾಕ್ಷಿದಾರರಾದ ಪ್ರಾಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಫಿರ್ಯಾದಿಗೆ ಸದಾಶಿವ ಮಠದ ಹತ್ತಿರ ಹಲ್ಲೆ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಆದುದ್ದರಿಂದ ಪ್ರಾಸಾ-1, 3 ಹಾಗೂ 4 ಸಾಕ್ಷಿದಾರರು ನಿಪಿ-1 ಫಿರ್ಯಾದಿಗೆ ಹಾಗೂ ತಮ್ಮ ತಮ್ಮ ಸಾಕ್ಷ್ಯಗಳಿಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ.

**24.** ಮುಂದುವರೆದು ಪ್ರಾಸಾ-1 ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿತರು ತನ್ನ ಮೇಲೆ ಹಲ್ಲೆ ಮಾಡಿದ್ದರಿಂದ ತನಗೆ ಎಚ್ಚರ ತಪ್ಪಿತ್ತು, ಆಗ ತನ್ನ ಹೆಂಡತಿ ಅನಸವ್ವ ಇವಳು ತನಗೆ ಉಪಚರಿಸಿರುತ್ತಾಳೆ ಎಂದು ನುಡಿದಿರುತ್ತಾರೆ. ಅದೇ ರೀತಿ ಪ್ರಾಸಾ-4 ಗಾಯಾಳು ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಘಟನೆಯ ದಿನ ಪ್ರಾಸಾ-

1 ರವರ ಹೆಂಡತಿಯಾದ ಅನಸವ್ವ ಇವಳು ಮನೆಯಲ್ಲಿದ್ದಳು ಹಾಗೂ ಅವಳು ಮನೆಯಿಂದ ಹೊರಗಡೆ ಬಂದು ಪ್ರಾಸಾ-1 ರವರನ್ನು ಬಿಡಿಸಿಕೊಂಡಿದ್ದಾಳೆ ಹಾಗೂ ಅವಳಿಗೆ ಗಲಾಟೆಯಲ್ಲಿ ಗಾಯಗಳಾಗಿಲ್ಲ ಮತ್ತು ಆರೋಪಿತರು ಅವಳ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು ಪ್ರಾಸಾ-1 ಹಾಗೂ 4 ರವರು ತಮ್ಮ ಪಾಟೀ ಸವಾಲಿನಲ್ಲಿ ಅನಸವ್ವ ಇವಳು ಪೋಲಿಸರಿಗೆ ಫೋನ ಹಚ್ಚಿ ಜಗಳದ ಬಗ್ಗೆ ತಿಳಿಸಿದಾಗ ಘಟನಾ ಸ್ಥಳಕ್ಕೆ ಪೋಲಿಸರು ಬಂದು ಗಾಯಾಳುಗಳನ್ನು ಕರೆದುಕೊಂಡು ಹೋದರು ಎಂದು ನುಡಿದಿರುತ್ತಾರೆ. ಸದರಿ ಪ್ರಾಸಾ-1 ಮತ್ತು 4 ರವರ ಸಾಕ್ಷ್ಯದ ಪ್ರಕಾರ ಪ್ರಾಸಾ-1 ರವರ ಹೆಂಡತಿಯಾದ ಅನಸವ್ವ ಇವಳು ಆರೋಪಿತರ ಮತ್ತು ಪ್ರಾಸಾ-1, 3, 4 ಮತ್ತು ಚಾಸಾ-5 ರವರ ನಡುವೆ ಆದ ಜಗಳಕ್ಕೆ ಪ್ರತ್ಯಕ್ಷದರ್ಶಿ ಆಗಿರುವುದು ಕಂಡುಬರುತ್ತದೆ. ಆದರೆ ಸದರಿ ಅನಸವ್ವ ಇವಳನ್ನು ಈ ಪ್ರಕರಣದಲ್ಲಿ ತನಿಖಾಧೀಕಾರಿಗಳು ವಿಚಾರಣೆ ಮಾಡಿ ಅವಳ ಹೇಳಿಕೆಯನ್ನು ಪಡೆದುಕೊಂಡು ಅವಳನ್ನು ಸಾಕ್ಷಿದಾರಳನ್ನಾಗಿ ಮಾಡಿರುವುದು ಕಂಡುಬರುವುದಿಲ್ಲ.

**25.** ಪ್ರಾಸಾ-4 ಗಾಯಾಳು ಸಾಕ್ಷಿದಾರರು ಘಟನೆಯ ದಿನ ಆರೋಪಿತರು ತನ್ನ ತಂಗಿಯಾದ ಕಾಶೀಬಾಯಿಗೆ ಬಡಿಗೆಯಿಂದ ಹೊಡೆದಿದ್ದಾರೆ, ಆದರೆ ಅವಳಿಗೆ ಗಾಯವಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಆದರೆ ಪ್ರಾಸಾ-1 ಫಿರ್ಯಾದಿದಾರರು ಹಾಗೂ ಮತ್ತೊಬ್ಬ ಗಾಯಾಳು ಸಾಕ್ಷಿದಾರರಾದ ಪ್ರಾಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ಘಟನೆಯ ದಿನ ಕಾಶೀಬಾಯಿ ಇವಳು ಸಹ ಇದ್ದಳು ಎಂದು ಮತ್ತು ಆರೋಪಿತರು ಅವಳ ಮೇಲೆ ಹಲ್ಲೆ ಮಾಡಿರುತ್ತಾರೆಂದು ನುಡಿದಿರುವುದಿಲ್ಲ. ಮುಂದುವರೆದು ತನೀಖಾಧಿಕಾರಗಳು ಸದರಿ ಕಾಶಿಬಾಯಿ ಇವಳನ್ನು ವಿಚಾರಣೆ ಮಾಡಿ ಅವಳ ಹೇಳಿಕೆಯನ್ನು

ಪಡೆದುಕೊಂಡು ದೋಷಾರೋಪಣ ಪಟ್ಟಿಯಲ್ಲಿ ಅವಳನ್ನು ಸಾಕ್ಷಿಯನ್ನಾಗಿ ಮಾಡಿರುವುದು ಕಂಡುಬರುವುದಿಲ್ಲ. ಆದುದ್ದರಿಂದ ಅಭಿಯೋಜನೆಯು ಹೇಳಿದಂತಹ ಘಟನೆ ಆರೋಪಿತರ ಮತ್ತು ಪ್ರಾಸಾ-1, 3, 4 ಹಾಗೂ ಚಾಸಾ-5 ರವರ ನಡುವೆ ನಡೆದ ಬಗ್ಗೆ ಸಂಶಯ ಉಂಟಾಗುತ್ತದೆ.

**26.** ಸದರಿ ಪ್ರಕರಣದಲ್ಲಿ ತನಿಖಾಧೀಕಾರಿಗಳಾದ ಚಾಸಾ-14 ರವರು ದಿ:11-07-2008 ರಂದು ಮುಂಜಾನೆ 8.30 ರಿಂದ 9.30 ಗಂಟೆಯವರೆಗೆ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ-2 ಮತ್ತು 3 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆಯನ್ನು ಮಾಡಿ ಗುನ್ಹೆ ಸ್ಥಳದಿಂದ ಮು.ಮಾ.1 ರಿಂದ 5 ಬಡಿಗೆಗಳನ್ನು ಮತ್ತು ಮು.ಮಾ.6 ರಿಂದ 10 ಕಲ್ಲುಗಳನ್ನು ಹಾಗೂ ಮು.ಮಾ.11 ಒಂದು ಶರ್ಟನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ಮತ್ತು ಗುನ್ಹೆ ಸ್ಥಳವನ್ನು ಪ್ರಾಸಾ-3 ಇವರು ತೋರಿಸಿರುತ್ತಾರೆ ಎಂಬುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ. ಪ್ರಾಸಾ-3 ಗಾಯಾಳು ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ತಾನು ಗುನ್ಹೆ ಸ್ಥಳವನ್ನು ಪೋಲಿಸರಿಗೆ ಪ್ರಾಸಾ-2 ಮತ್ತು 5 ರವರ ಸಮಕ್ಷಮ ತೋರಿಸಿದ ಮೇರೆಗೆ ಪೋಲಿಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿ ಮು.ಮಾ.1 ರಿಂದ 11 ಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆಂದು ನುಡಿದಿರುವುದಿಲ್ಲ. ಮುಂದುವರೆದು ಪ್ರಾಸಾ-3 ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಮು.ಮಾ. 1 ರಿಂದ 11 ಗಳನ್ನು ನೋಡಿ ತನಗೆ ಗುರುತಿಸಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಪ್ರಾಸಾ-2 ಗುನ್ಹೆ ಸ್ಥಳ ಪಂಚನಾಮೆಯ ಪಂಚ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಲೋಕಾಪೂರ ಪೋಲಿಸರು ಸರ್ಕಾರಿ ದವಾಖಾನೆ ಮುಧೋಳದಲ್ಲಿ ಬರೆದಿಟ್ಟ ಪಂಚನಾಮೆಗೆ ತನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ ಹಾಗೂ ತನ್ನ ಸಮಕ್ಷಮ ಪೋಲಿಸರು ಏನು

ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಇನ್ನೊಬ್ಬ ಗುನ್ನೆ ಸ್ಥಳ ಪಂಚನಾಮೆಯ ಪಂಚ ಸಾಕ್ಷಿದಾರರಾದ ಪ್ರಾಸಾ-5 ರವರು ಈಗ ಸುಮಾರು 4 ವರ್ಷಗಳ ಹಿಂದೆ ಚಾಸಾ-1 ರವರ ಮನೆಯ ಮುಂದೆ ಬಡಿದಾಟ ಆಗಿದ್ದರಿಂದ ಪೋಲಿಸರು ಬಂದು ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಹಾಗೂ ಸದರಿ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ, ತನ್ನನ್ನು ಚಾಸಾ-1 ರವರನ್ನು ಬಿಟ್ಟರೆ ಪಂಚನಾಮೆ ಮಾಡುವ ಕಾಲಕ್ಕೆ ಬೇರೆ ಯಾರು ಇರಲಿಲ್ಲ ಹಾಗೂ ಸದರಿ ಪಂಚನಾಮೆಯ ಕಾಲಕ್ಕೆ ಯಾವುದೇ ವಸ್ತುಗಳನ್ನು ಪೋಲಿಸರು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಮುಂದುವರೆದು ಸದರಿ ಗುನ್ನೆ ಸ್ಥಳ ಪಂಚನಾಮೆಯನ್ನು ಮಾಡಿದ ತನಿಖಾಧಿಕಾರಿಗಳಾದ ಚಾಸಾ-14 ರವರಿಗ ಈ ನ್ಯಾಯಾಲಯವು ಹಲವಾರು ಬಾರಿ ಸಮನ್ಸ ಮತ್ತು ವಾರಂಟ ಹೊರಡಿಸಿದರೂ ಸಹ ಅವರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದುದ್ದರಿಂದ ಪ್ರಾಸಾ-2, 3 ಹಾಗೂ 5 ರವರ ಸಾಕ್ಷ್ಯದ ಮುಖಾಂತರ ಅಭಿಯೋಜನೆಯು ಪೋಲಿಸರು ನಿಪಿ-2 ರಂತೆ ಗುನ್ನೆ ಸ್ಥಳ ಪಂಚನಾಮೆಯನ್ನು ಮಾಡಿ ಗುನ್ನೆ ಸ್ಥಳದಿಂದ ಮು.ಮಾ.1 ರಿಂದ 11 ಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆಂದು ರುಜುವಾತು ಪಡಿಸಲು ವಿಫಲವಾಗಿರುತ್ತದೆ.

**27.** ಸದರಿ ಪ್ರಕರಣದಲ್ಲಿ ಅಭಿಯೋಜನೆಯು ವಿಚಾರಣೆ ಮಾಡಿದಂತಹ ಪ್ರಾಸಾ-6, 9 ಮತ್ತು 11 ಇವರು ಆರೋಪಿತರು ಪ್ರಾಸಾ-1, 3, 4 ಹಾಗೂ 5 ರವರ ಮೇಲೆ ಹಲ್ಲೆ ಮಾಡಿದಾಗ ಸದರಿ ಜಗಳವನ್ನು ಬಿಡಿಸಿಕೊಂಡ ಪ್ರತ್ಯಕ್ಷ ಸಾಕ್ಷಿದಾರರು ಇರುತ್ತಾರೆ. ಪ್ರಾಸಾ-6 ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಈಗ ಸುಮಾರು 4 ವರ್ಷಗಳ ಹಿಂದೆ ಮುಂಜಾನೆ 8.00 ಗಂಟೆಯ ಸುಮಾರಿಗೆ ಕಾಡರಕೊಪ್ಪ ಗ್ರಾಮದ

ಸದಾಶಿವ ಮಠದ ಹತ್ತಿರ ಫಿರ್ಯಾದಿದಾರರು ಮತ್ತು ಆರೊಪಿತರು ಜಗಳವಾಡುತ್ತಿದ್ದರು ಆಗ ತಾನು ಹೋಗಿ ಬಿಡಿಸಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ-1 ಮತ್ತು ಆರೋಪಿಯನ್ನು ಮಾತ್ರ ನೋಡಿರುತ್ತೇನೆ, ಜಗಳದಲ್ಲಿ ಚಾಸಾ-1 ರವರ ತಲೆಗೆ ಯಾರು ಹೊಡೆದರು ಎಂದು ತಾನು ನೋಡಿರುವುದಿಲ್ಲ ಹಾಗೂ ಜಗಳ ಬಿಡಿಸುವ ಕಾಲಕ್ಕೆ ತಾನೊಬ್ಬನೆ ಇದ್ದೇ ಎಂದು ನುಡಿದಿರುತ್ತಾರೆ. ಅದೇ ರೀತಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-9 ಮತ್ತು 11 ರವರು ತಮ್ಮ ಸಾಕ್ಷ್ಯದಲ್ಲಿ ತನ್ನ ಸಮಕ್ಷಮ ಆರೋಪಿತರ ಮತ್ತು ಫಿರ್ಯಾದಿದಾರರ ನಡುವೆ ಯಾವುದೇ ಜಗಳವಾಗಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದುದ್ದರಿಂದ ಗಾಯಾಳು ಸಾಕ್ಷಿದಾರರಾದ ಪ್ರಾಸಾ-1, 3 ಮತ್ತು 4 ರವರ ಸಾಕ್ಷ್ಯಕ್ಕೆ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-6, 9 ಮತ್ತು 11 ರವರು ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಒಂದು ವೇಳೆ ನಿಜವಾಗಿಯೂ ಅಭಿಯೋಜನೆಯ ಹೇಳಿದಂತಹ ಘಟನೆ ಆರೋಪಿತರ ಮತ್ತು ಪ್ರಾಸಾ-1 ರವರ ಮದ್ಯೆ ಆಗಿದ್ದರೆ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-6, 9 ಮತ್ತು 11 ರವರು ಪ್ರಾಸಾ-1, 3 ಮತ್ತು 4 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯ ನುಡಿಯಬಹುದಾಗಿತ್ತು. ಆದುದ್ದರಿಂದ ಅಭಿಯೋಜನೆಯು ಹೇಳಿದಂತಹ ಘಟನೆ ಆರೋಪಿತರ ಮತ್ತು ಫಿರ್ಯಾದಿದಾರರಾದ ಪ್ರಾಸಾ-1 ರವರ ಮದ್ಯ ನಡೆದಿರುವ ಬಗ್ಗೆ ಸಂಶಯ ಉಂಟಾಗುತ್ತದೆ.

**28.** ಸದರಿ ಪ್ರಕರಣದಲ್ಲಿ ಅಭಿಯೋಜನೆಯು ವಿಚಾರಣೆ ಮಾಡಿದಂತಹ ಪ್ರಾಸಾ-7 ಇವರು ನಿಪಿ-1 ಫಿರ್ಯಾದಿಯನ್ನು ಬರೆದು ದಸ್ತೂರ ಸಾಕ್ಷಿದಾರರು ಇರುತ್ತಾರೆ ಹಾಗೂ ಸದರಿ ಸಾಕ್ಷಿದಾರರು ತಾನು ಚಾಸಾ-1 ರವರು ಹೇಳಿದಂತೆ ನಿಪಿ-1 ಫಿರ್ಯಾದಿಯನ್ನು ಬರದು ಸಹಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ಅದೇ ರೀತಿ ಗಾಯಾಳುಗಳಾದ ಪ್ರಾಸಾ-

1, 3 ಹಾಗೂ 4 ಮತ್ತು ಚಾಸಾ-5 ರವರಿಗೆ ಚಿಕಿತ್ಸೆಯನ್ನು ನೀಡಿದ ವೈದ್ಯಾಧೀಕಾರಿಗಳಾದ ಪ್ರಾಸಾ-8 ಇವರು ತಾನು ದಿ:10-07-2008 ರಂದು ಪ್ರಾಸಾ-1, 3, 4 ಮತ್ತು ಚಾಸಾ-5 ರವರಿಗೆ ಪರೀಕ್ಷಿಸಿ ನಿಪಿ-4 ರಿಂದ 7 ರಂತೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆಂದು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಆದರೆ ತದನಂತರ ಸದರಿ ಸಾಕ್ಷಿದಾರರು ನ್ಯಾಯಾಲಯಕ್ಕೆ ಹಾಜರಾಗಿ ಆರೋಪಿತರ ಪರ ವಕೀಲರು ಮಾಡುವ ಪಾಟೀ ಸವಾಲಿಗೆ ಹಾಜರಾಗಿರುವುದಿಲ್ಲ. ಮುಂದುವರೆದು ಮತ್ತೊಬ್ಬ ವೈದ್ಯಾಧಿಕಾರಿಯಾದ ಪ್ರಾಸಾ-10 ಇವರು ಈಗ ಸುಮಾರು 10 ವರ್ಷಗಳ ಹಿಂದೆ ತಾನು ಗಾಯಾಳು ಚಾಸಾ-5 ಮತ್ತು ಪ್ರಾಸಾ-1 ರವರನ್ನು ಪರೀಕ್ಷಿಸಿ ನಿಪಿ-9 ಹಾಗೂ 10 ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆಂದು ನುಡಿದಿದ್ದರೂ ಸಹಿತ ಅವರು ತಮ್ಮ ಪಾಟೀ ಸವಾಲಿನಲ್ಲಿ ನಿಪಿ-10 ಮತ್ತು 11 ರಲ್ಲಿ ನಮೂದಿಸಿರುವ ಗಾಯಗಳು ಒಬ್ಬ ವ್ಯಕ್ತಿ ಮೋಟರ ಸೈಕಲ ಮೇಲಿಂದ ಗಟ್ಟಿಯಾದ ಜಾಗದಲ್ಲಿ ಬಿದ್ದಾಗ ಆಗುವ ಸಾಧ್ಯತೆ ಇರುತ್ತದೆಂದು ನುಡಿದಿರುತ್ತಾರೆ. ಆದುದ್ದರಿಂದ ಪ್ರಾಸಾ-8 ಮತ್ತು 10 ರವರ ಸಾಕ್ಷ್ಯವನ್ನು ನಂಬಿ ನಿಪಿ-4 ರಿಂದ 7 ಹಾಗೂ 9 ಮತ್ತು 10 ಗಾಯದ ಪ್ರಮಾಣ ಪತ್ರಗಳಲ್ಲಿ ನಮೂದಿಸಿರುವ ಗಾಯಗಳು ಆರೋಪಿತರು ಪ್ರಾಸಾ-1, 3, 4 ಮತ್ತು ಚಾಸಾ-5 ರವರ ಮೇಲೆ ಹಲ್ಲೆ ಮಾಡಿದ್ದರಿಂದ ಆಗಿರುತ್ತವೆಂದು ನಿರ್ಣಯಕ್ಕೆ ಬರಲು ಸಾಧ್ಯವಿರುವುದಿಲ್ಲ.

**29.** ಮುಂದುವರೆದು ಸದರಿ ಪ್ರಕರಣದಲ್ಲಿ ಆರೋಪಿ ನಂ.7 ರಿಂದ 24 ರವರು ಸೇರ್ಪಡೆ ಆದ ನಂತರ ಪ್ರಾಸಾ-1 ರಿಂದ 10 ರವರಿಗೆ ಪಾಟೀ ಸವಾಲಿಗೆ ಹಾಜರಾಗಲು ಸಮನ್ಸ ಹೊರಡಿಸಿದಾಗ ಪ್ರಾಸಾ-3, 4 ಮತ್ತು 10 ರವರು ತೀರಿಕೊಂಡಿರುತ್ತಾರೆಂದು ವರದಿಯಾಗಿರುತ್ತದೆ. ಅದೇ ರೀತಿ ಪ್ರಾಸಾ-1, 2 ಮತ್ತು 7 ಇವರು ಆರೋಪಿ ನಂ.7, 8,

10 ರಿಂದ 14, 17 ರಿಂದ 20, 22 ಮತ್ತು 24 ರವರ ಪರ ವಕೀಲರು ಮಾಡುವ ಪಾಟೀ ಸವಾಲಿಗೆ ಹಾಜರಾಗಿರುತ್ತಾರೆ. ಅದೇ ರೀತಿ ಪ್ರಾಸಾ-5, 6, 8 ಮತ್ತು 9 ರವರಿಗೆ ಈ ನ್ಯಾಯಾಲಯವು ಹಲವಾರು ಬಾರಿ ಸಮನ್ಸ ಮತ್ತು ವಾರಂಟ ಹೊರಡಿಸಿದರೂ ಸಹಿತ ಸದರಿ ಸಾಕ್ಷಿದಾರರು ಆರೋಪಿ ನಂ.7, 8, 10 ರಿಂದ 14, 17 ರಿಂದ 20, 22 ಮತ್ತು 24 ರವರ ಪರ ವಕೀಲರು ಮಾಡುವ ಪಾಟೀ ಸವಾಲಿಗೆ ಹಾಜರಾಗಿರುವುದಿಲ್ಲ.

**30.** ನಿಪಿ-1 ಫಿರ್ಯಾದಿಯಲ್ಲಿ ಮತ್ತು ಪ್ರಾಸಾ-1 ಮತ್ತು 3 ರವರ ಸಾಕ್ಷ್ಯದಲ್ಲಿ ಆರೋಪಿತರು ಪ್ರಾಸಾ-1, 3, 4 ಮತ್ತು ಚಾಸಾ-5 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆಂದು ಆರೋಪವಿದೆ. ಆದರೆ ಪ್ರಾಸಾ-1 ಮತ್ತು 2 ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ನಿಖರವಾಗಿ ಯಾವ ಯಾವ ಶಬ್ದಗಳನ್ನು ಬಳಸಿ ಅವರಿಗೆ ನಿಂದಿಸಿದರು ಎಂದು ನುಡಿದಿರುವುದಿಲ್ಲ. ಮುಂದುವರೆದು ಸದರಿ ಹೇಳಿಕೆಯನ್ನು ಆರೋಪಿತರು ಶಾಂತಭಂಗವನ್ನುಂಟು ಮಾಡುವ ಉದ್ದೇಶದೀಂದ ಮಾಡಿರುತ್ತಾರೆಂದು ಹೇಳಲು ಆಗುವುದಿಲ್ಲ ಹಾಗೂ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿದ್ದರಿಂದ ಅದು ಶಾಂತಭಂಗ ಮಾಡಲು ಪ್ರಾಸಾ-1, 3, 4 ಮತ್ತು ಚಾಸಾ-5 ರವರನ್ನು ಪ್ರಚೋದಿಸಿತು ಎಂದು ಅಭಿಯೋಜನೆಯ ಪ್ರಕರಣವಲ್ಲ.

**31.** ನಿಪಿ-1 ಫಿರ್ಯಾದಿಯಲ್ಲಿ ಆರೋಪಿತರು ಹೋಗುವಾಗ ನಿಮಗೆ ಬಿಡುವುದಿಲ್ಲ ಖಲಾಸ ಮಾಡುತ್ತೇವೆ ಅಂತಾ ಜೀವದ ಭಯ ಹಾಕಿದರು ಎಂದು ಉಲ್ಲೇಖ ಇರುತ್ತದೆ. ಪ್ರಾಸಾ-1 ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಸ್ಥಳದಲ್ಲಿ ಬಿಡಬೇಡಿ ಅಂತಾ ಹೇಳಿದರು ಎಂದು ನುಡಿದಿರುತ್ತಾರೆ. ಆದರೆ ಪ್ರಾಸಾ-1 ರವರ ಸಾಕ್ಷ್ಯಕ್ಕೆ ಪೂರಕವಾಗಿ ಗಾಯಾಳು ಸಾಕ್ಷಿದಾರರಾದ ಪ್ರಾಸಾ-1, 3 ಮತ್ತು 4 ಆರೋಪಿತರು ತಮಗೆ ಜೀವ ಬೆದರಿಕೆ

ಹಾಕಿ ಹೋದರು ಎಂದು ನುಡಿದಿರುವುದಿಲ್ಲ. ಮುಂದುವರೆದು ನಿಪಿ-1 ಫೀರ್ಯಾದಿ ಪ್ರಕಾರ ಆರೋಪಿತರು ಹಲ್ಲೆ ಮಾಡಿದ ನಂತರ ಪ್ರಾಸಾ-1, 3, 4 ಮತ್ತು ಚಾಸಾ-5 ರವರಿಗೆ ಜೀವ ಬೆದರಿಕೆ ಹಾಕಿ ಹೋದರು ಎಂದು ನಮೂದು ಇರುತ್ತದೆ. ಆದರೆ ಪ್ರಾಸಾ-4 ಗಾಯಾಳು ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಪೋಲಿಸರು ಘಟನಾ ಸ್ಥಳಕ್ಕೆ ಬಂದಾಗ ಆರೋಪಿತರು ಘಟನಾ ಸ್ಥಳದಲ್ಲಿಯೇ ಹಾಜರಿದ್ದರು ಎಂದು ನುಡಿದಿರುತ್ತಾರೆ. ಆದುದ್ದರಿಂದ ಪ್ರಾಸಾ-1, 3 ಹಾಗೂ 4 ಸಾಕ್ಷಿದಾರರು ನಿಪಿ-1 ಫಿರ್ಯಾದಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುವುದಿಲ್ಲ.

**32.** ಈ ಮೇಲೆ ಹೇಳಿದ ಅಭಿಯೋಜನೆಯು ಹಾಜರು ಮಾಡಿದ ಎಲ್ಲ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಪ್ರಾಸಾ-1, 3 ಮತ್ತು 4 ರವರು ನಿಪಿ-1 ಫಿರ್ಯಾದಿಗೆ ಹಾಗೂ ತಮ್ಮ ತಮ್ಮ ಸಾಕ್ಷ್ಯಗಳಿಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಮುಂದುವರೆದು ಸದರಿ ಸಾಕ್ಷಿದಾರರ ಸಾಕ್ಷ್ಯಕ್ಕೆ ಪೂರಕವಾಗಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-6, 9 ಮತ್ತು 11 ರವರು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಅದೇ ರೀತಿ ಅಭಿಯೋಜನೆಯು ಸದರಿ ಪ್ರಕರಣದಲ್ಲಿ ಮು.ಮಾ.1 ರಿಂದ 11 ವಸ್ತುಗಳನ್ನು ಗುನ್ಹೆ ಸ್ಥಳದ ಪಂಚನಾಮೆಯ ಕಾಲಕ್ಕೆ ಜಪ್ತಿಪಡಿಸಿಕೊಂಡಿರುತ್ತದೆಂದು ರುಜುವಾತು ಪಡಿಸಲು ವಿಫಲವಾಗಿರುತ್ತದೆ. ಅದೇ ರೀತಿ ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಗಳು ಪ್ರಾಸಾ-4 ರವರ ಸಾಕ್ಷ್ಯದ ಪ್ರಕಾರ ಘಟನೆಯ ಸಮಯದಲ್ಲಿ ಹಾಜರಿದ್ದ ಕಾಶಿಬಾಯಿ ಹಾಗೂ ಪ್ರಾಸಾ-1 ರವರ ಹೆಂಡತಿಯಾದ ಅನಸವ್ವ ಇವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡು ಅವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಮುಂದುವರೆದು ಆರೋಪಿತರ ಮತ್ತು ಪ್ರಾಸಾ-3

ಮತ್ತು 4 ರವರ ಮದ್ಯ ಜಮೀನಕ್ಕೆ ಸಂಬಂಧಿಸಿದಂತೆ ದಿವಾಣಿ ಸ್ವರೂಪದ ವ್ಯಾಜ್ಯ ಇದ್ದು, ಆದುದ್ದರಿಂದ ಸದರಿ ಪ್ರಕರಣದಲ್ಲಿ ಪ್ರಾಸಾ-1, 3 ಮತ್ತು 4 ಹಿತಾಸಕ್ತಿಯುಳ್ಳ ಸಾಕ್ಷಿದಾರರು ಇರುತ್ತಾರೆ. ಆದುದ್ದರಿಂದ ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನಂಬಿ ಆರೋಪಿತರು ಘಟನೆಯ ದಿನ ಅಕ್ರಮಕೂಟ ಕಟ್ಟಿಕೊಂಡು ಬಂದು ಪ್ರಾಸಾ-1, 3, 4 ಹಾಗೂ ಚಾಸಾ-5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಮು.ಮಾ.1 ರಿಂದ 10 ವಸ್ತುಗಳಿಂದ ಹಲ್ಲೆ ಮಾಡಿ ಅವರಿಗೆ ಸಾಧಾ ಮತ್ತು ತೀವ್ರ ಸ್ವರೂಪದ ಗಾಯಪಡಿಸಿ ಜೀವ ಬೆದರಿಕೆ ಹಾಕಿರುತ್ತಾರೆಂದು ತಿರ್ಮಾಣಕ್ಕೆ ಬರಲು ಸಾಧ್ಯವಿಲ್ಲ. ಆದುದ್ದರಿಂದ ಅಭಿಯೋಜನೆಯು ಆರೋಪಿತರ ವಿರುದ್ದ ಮಾಡಿರುವ ಅಪರಾಧಗಳನ್ನು ನಿಸ್ಸಂದೇಹವಾಗಿ ರುಜುವಾತು ಪಡಿಸಲು ವಿಫಲವಾಗಿರುತ್ತದೆ. ಆದುದ್ದರಿಂದ, ಸದರಿ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ ಅವರನ್ನು ಬಿಡುಗಡೆ ಮಾಡುವುದು ಸೂಕ್ತವೆಂದು ಈ ನ್ಯಾಯಾಲಯ ತಿರ್ಮಾಣಕ್ಕೆ ಬಂದು **ಅಂಶ ನಂ.1 ರಿಂದ 8 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

**33.ಅಂಶ ನಂ.9:** ಆರೋಪಿತರ ವಿರುದ್ಧ ಮಾಡಲಾದ ಅಪರಾಧಗಳನ್ನು ಸಾಭೀತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಆರೋಪಿತರು ದೋಷಮುಕ್ತರಾಗಲು ಅರ್ಹರಾಗಿದ್ದು ಕಾರಣ ಈ ಕೆಳಕಂಡ ಆದೇಶವನ್ನು ನಾನು ಮಾಡಲು ಇಚ್ಚಿಸುತ್ತೇನೆ.

## :: ಆದೇಶ ::

**ದಂಡ ಪ್ರಕ್ರಿಯಾ ಸಂಹಿತೆ 1973 ಕಲಂ 248(1) ರಂತೆ ಆರೋಪಿ ನಂ.1 ರಿಂದ 7, 10 ರಿಂದ 14, 17 ರಿಂದ 20, 22 ಮತ್ತು 24 ರವರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ**

**143, 147, 148, 323, 324, 326, 504, 506(2) ಸಹವಾಚಕ 149 ರಡಿಯಲ್ಲಿನ ಆರೋಪಣೆಗಳಿಗಾಗಿ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.**

**ಆರೋಪಿ ನಂ.1 ರಿಂದ 7, 10 ರಿಂದ 14, 17 ರಿಂದ 20, 22 ಮತ್ತು 24 ರವರ ಮತ್ತು ಜಾಮೀನುದಾರರ ಜಾಮೀನು ಮತ್ತು ಮುಚ್ಚಳಿಕೆ ಪತ್ರಗಳನ್ನು ರದ್ದುಗೊಳಿಸಲಾಗಿದೆ.**

(ಶೀಘ್ರಲಿಪಿಗಾರರರಿಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಗಣಕಯಂತ್ರದಿಂದ ಪಡೆದಕೊಂಡು ಈ ದಿನ **13 ನೇ ಜುಲೈ-2026** ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

LAGAMA SHIVANAPPA HUKKERI
Digitally signed by LAGAMA SHIVANAPPA HUKKERI
Date: 2026.07.16 17:08:47 +0530

**(ಶ್ರೀ.ಲಗಮಾ ಹುಕ್ಕೇರಿ)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ,**
**ಮುಧೋಳ.**

**ಅನುಬಂಧಗಳು**

**ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿದಾರರುಃ**

ಪ್ರಾಸಾ-1: ರಾಮಣ್ಣ ಶಂಕ್ರೆಪ್ಪ ಮುದ್ನೂರ.
ಪ್ರಾಸಾ-2: ಬಸವಂತ ಲಕ್ಷ್ಮಪ್ಪ ನಾಯಕ.
ಪ್ರಾಸಾ-3: ರುಕ್ಮವ್ವ ರಂಗಪ್ಪ ನಾಯಕ.
ಪ್ರಾಸಾ-4: ರಾಮಪ್ಪ ರಂಗಪ್ಪ ನಾಯಕ.
ಪ್ರಾಸಾ-5: ಕಾಡಪ್ಪ ತಮ್ಮಣ್ಣ ಗೊಡಚಿ.
ಪ್ರಾಸಾ-6: ರವಿ ರಂಗಪ್ಪ ನಾಯಕ.
ಪ್ರಾಸಾ-7: ರಂಗನಗೌಡ ವಸಂತಗೌಡ ನಾಯಕ.
ಪ್ರಾಸಾ-8: ಚಂದ್ರಶೇಖರ ಈರಯ್ಯ ಹಿರೇಮಠ.
ಪ್ರಾಸಾ-9: ವಿಠ್ಠಲ ಕಲ್ಲವ್ವ @ ರುಕ್ಮವ್ವ ಗುಜ್ಜಪ್ಪಗೋಳ.
ಪ್ರಾಸಾ-10: ರಮೇಶ ವೆಂಕನಗೌಡ ಪಾಟೀಲ.
ಪ್ರಾಸಾ-11: ಶಂಕರಗೌಡ ಯಮನಪ್ಪ ಗೌಡರ.
ಪ್ರಾಸಾ-12: ಧನಸಿಂಗ ಸಕ್ಕು ನಾಯಕ.

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳುಃ**

ನಿಪಿ-1 : ಫಿರ್ಯಾದಿ.

ನಿಪಿ-1(ಎ) : ಪ್ರಾಸಾ-1 ರವರ ಸಹಿ.

ನಿಪಿ-1(ಬಿ) : ಪ್ರಾಸಾ-7 ರವರ ಸಹಿ.

ನಿಪಿ-1(ಸಿ) : ಪ್ರಾಸಾ-12 ರವರ ಸಹಿ.

ನಿಪಿ-2 : ಗುನ್ನೆ ಸ್ಥಳ ಪಂಚನಾಮೆ.

ನಿಪಿ-2(ಎ) : ಪ್ರಾಸಾ-5 ರವರ ಸಹಿ.

ನಿಪಿ-3 : ಪ್ರಾಸಾ-6 ರವರ ಹೇಳಿಕೆ.

ನಿಪಿ-4 ರಿಂದ 7: ಗಾಯದ ಪ್ರಮಾಣ ಪತ್ರಗಳು.

ನಿಪಿ-4(ಎ) : ಪ್ರಾಸಾ-8 ರವರ ಸಹಿ.

ನಿಪಿ-5(ಎ) : ಪ್ರಾಸಾ-8 ರವರ ಸಹಿ.

ನಿಪಿ-6(ಎ) : ಪ್ರಾಸಾ-8 ರವರ ಸಹಿ.

ನಿಪಿ-7(ಎ) : ಪ್ರಾಸಾ-8 ರವರ ಸಹಿ.

ನಿಪಿ-8 : ಪ್ರಾಸಾ-9 ರವರ ಹೇಳಿಕೆ.

ನಿಪಿ-9 ಮತ್ತು 10: ಗಾಯದ ಪ್ರಮಾಣ ಪತ್ರಗಳು.

ನಿಪಿ-9(ಎ) : ಪ್ರಾಸಾ-10 ರವರ ಸಹಿ.

ನಿಪಿ-10(ಎ) : ಪ್ರಾಸಾ-10 ರವರ ಸಹಿ.

ನಿಪಿ-11 : ಪ್ರಾಸಾ-11 ರವರ ಹೇಳಿಕೆ.

ನಿಪಿ-12 : ಪ್ರಥಮ ವರ್ತಮಾನ ವರದಿ.

ನಿಪಿ-12(ಎ) : ಪ್ರಾಸಾ-12 ರವರ ಸಹಿ.

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳುಃ**

ಮು.ಮಾ.1 ರಿಂದ 5: ದೊಣ್ಣೆಗಳು.

ಮು.ಮಾ.6 ರಿಂದ 10: ಕಲ್ಲುಗಳು.

ಮು.ಮಾ.11 : ಒಂದು ಬಿಳಿ ಶರ್ಟ.

**ಆರೋಪಿತರ ಪರವಾಗಿ ವಿಚಾರಸಲಾದ ಸಾಕ್ಷಿದಾರರುಃ**

---ಇಲ್ಲಾ---

**<u>ಆರೋಪಿತರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳು:</u>**

---ಇಲ್ಲಾ---

**<u>ಆರೋಪಿತರ ಪರವಾಗಿ ಗುರುತಿಸಲಾದ ಮುದ್ದೆಮಾಲುಗಳು:</u>**

---ಇಲ್ಲಾ---

LAGAMA SHIVANAPPA HUKKERI
Digitally signed by LAGAMA SHIVANAPPA HUKKERI
Date: 2026.07.16 17:08:55 +0530

**(ಶ್ರೀ.ಲಗಮಾ ಹುಕ್ಕೇರಿ)**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ,**

**ಮುಧೋಳ.**